# ನಮ್ಮ ಜನ
# NAMMA JANA

ಸಂಪಾದಕರು: ದರ್ಶನ್.ಟಿ
Editor : DARSHAN.T

ಕನ್ನಡ ದಿನ ಪತ್ರಿಕೆ
Kannada Daily

ಸಂಪುಟ – 01 ಸಂಚಿಕೆ – 148
Volume - 01 Issue - 148

ಶೀರ್ಷಿಕೆ ಕೋಡ್: ಕೆಎಆರ್ ಕೆಎಎನ್ 28269
Title- Code: KARKAN 28269

ಚಿತ್ರದುರ್ಗ
Chitradurga

ದಿನಾಂಕ: 24–12–2023 ಭಾನುವಾರ
Date: 24-12-2023 Sunday

ಪುಟ: 4
Page: 4

ಬೆಲೆ : ರೂ.2–00
Price: Rs. 2-00



**ಒಳಪುಟದ ಸುದ್ದಿಗಳು**

ಮಕ್ಕಳಿಂದ ಶೌಚಾಲಯ ಕ್ಲೀನಿಂಗ್ ಕೇಸ್, ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ: ಸಿಎಂ 2

ಇಂದು ಲಕ್ಷ್ಮಿನಾರಾಯಣ ಸ್ವಾಮಿ, ಆಂಜನೇಯ ಸ್ವಾಮಿ ಮಹಾ ಬ್ರಹ್ಮರಥೋತ್ಸವ 3

ಹಿರಿಯೂರಿನಿಂದ ಚಿತ್ರದುರ್ಗಕ್ಕೆ ಬೆಳಗ್ಗೆ, ಸಂಜೆ ಸಮಯಕ್ಕೆ ಬಸ್ ಕಲ್ಪಿಸುವಂತೆ ಆಗ್ರಹ 4



ಸುದ್ದಿ, ಜಾಹಿರಾತಿಗೆ
9686622252


**ಶುಭ ನುಡಿ**

ಭಯ ಜೀವನದ ದಾರಿ
ತಪ್ಪಿಸುತ್ತೇ ಧೈರ್ಯ ಗೆಲುವಿನ
ದಾರಿ ತೆರೆಸುತ್ತೆ

» ಶುಭೋದಯ



# ಮಿಂಚೇರಿ

## ಎತ್ತಿನ ಗಾಡಿ ಏರೋಣ ಬನ್ನಿ ಮಿಂಚೇರಿ ಯಾತ್ರೆ ಮಾಡೋಣ ಬನ್ನಿ

» **ಚಿತ್ರದುರ್ಗ**

"ಎತ್ತಿನ ಗಾಡಿ ಏರೋಣ ಬನ್ನಿ ಮಿಂಚೇರಿ ಯಾತ್ರೆ ಮಾಡೋಣ ಬನ್ನಿ' ಎಂಬ ಹರ್ಷೋದ್ಗಾರದೊಂದಿಗೆ ಮ್ಯಾಸ ಬೇಡ ಬುಡಕಟ್ಟು ಸಂಸ್ಕೃತಿಯ ಮ್ಯಾಸ ನಾಯಕ ಸಮುದಾಯದ ದಂಡು ಮಿಂಚೇರಿ ಜಾತ್ರೆಯಲ್ಲಿ ಪಾಲ್ಗೊಳ್ಳಲು ಶನಿವಾರ ಸಾಲು ಸಾಲು ಎತ್ತಿನಗಾಡಿಗಳಲ್ಲಿ ಸಂಭ್ರಮದಿ ತೆರಳಿದರು.

ನೂರಾರು ಎತ್ತಿನಗಾಡಿಗಳಲ್ಲಿ ತೆರಳುವ ಮಿಂಚೇರಿ ಜಾತ್ರೆ ತನ್ನದೇ ಆದ ವೈಶಿಷ್ಟ ಹೊಂದಿದೆ. ಬುಡಕಟ್ಟು ಸಂಸ್ಕೃತಿಯ ಈ ಆಚರಣೆ ಆಧುನಿಕತೆಯ ಸ್ಪರ್ಶವನ್ನೂ ಪಡೆದುಕೊಂಡಿದೆ.

ಬಚ್ಚಬೋರನಹಟ್ಟಿಯಲ್ಲಿ ಶನಿವಾರ ದೇವರ ಮಜ್ಜನ ಬಾವಿಯಲ್ಲಿ ಗುರು ಹಿರಿಯರೊಂದಿಗೆ ಗಂಗಾಪೂಜೆ ನೆರವೇರಿಸಿ ಮಿಂಚೇರಿ ಯಾತ್ರೆಗೆ ವಿಧ್ಯುಕ್ತವಾಗಿ ಚಾಲನೆ ನೀಡಲಾಯಿತು.

**ಬಚ್ಚಬೋರನಹಟ್ಟಿಯಿಂದ ಸಾಗುವ ಮಾರ್ಗ:** ಬಚ್ಚಬೋರನಹಟ್ಟಿ ಮಾರ್ಗವಾಗಿ ಗೋನೂರು ರಾಷ್ಟ್ರೀಯ ಹೆದ್ದಾರಿ ಮೂಲಕ ಚಿತ್ರದುರ್ಗ, ಸೀಬಾರ, ಗೂಳಯ್ಯನಹಟ್ಟಿ, ಕ್ಯಾಸಾಪುರ, ಕಡ್ಲೆಗುದ್ದು, ಮೇಗಳಹಟ್ಟಿ, ಕೋಣನೂರು, ಚುಕ್ಕೇನಹಳ್ಳಿ, ಸಿರಿಗೆರೆ, ಮದಕರಿಪುರ ಹಾಗೂ ಮಿಂಚೇರಿಪುರದವರೆಗೆ ಎತ್ತಿನಬಂಡಿ ಯಾತ್ರೆ ನಡೆಯಲಿದೆ. ಮ್ಯಾಸ ನಾಯಕ ಸಮುದಾಯದ ಸಾಂಸ್ಕೃತಿಕ ವೀರ ಎಂಬ ಖ್ಯಾತಿಯ ಗಾದ್ರಿಪಾಲ ನಾಯಕ ಸ್ವಾಮಿಯ ಹೆಸರಿನಲ್ಲಿ ಸಾಲು ಸಾಲಾಗಿ ಹೊರಟ ಎತ್ತಿನ ಗಾಡಿಗಳು ಕಣ್ಮನ ಜನರ ಕಣ್ಮನ ಸೆಳೆಯಿತು.

**ಏನಿದು ಮಿಂಚೇರಿ ಜಾತ್ರೆ?:** ಬುಡಕಟ್ಟು ಸಂಸ್ಕೃತಿಯ ಮ್ಯಾಸ ನಾಯಕ ಎಂದೇ ಹೆಸರಾಗಿರುವ ಗಾದ್ರಿಪಾಲ ನಾಯಕ ತಾಲೂಕಿನ ಸಿರಿಗೆರೆ ಬಳಿಯ ಮೆದಕರಿಪುರ ಗ್ರಾಮದ ಬಳಿಯ ಕಾಡಿನಲ್ಲಿ ಹುಲಿಯ ಜತೆ ಸೆಣಸಾಡಿ ಮರಣ ಹೊಂದಿದ ಎಂಬ ಪ್ರತೀತಿ ನಾಯಕ ಸಮುದಾಯದವರಲ್ಲಿದೆ. ಈ ಕಾರಣದಿಂದ ಪ್ರತಿ ಐದು ವರ್ಷಗಳಿಗೆಣಟಿಜಜಜಿಟಿಜಜಮ್ಮೆ ಮಿಂಚೇರಿ ಜಾತ್ರೆ ಆಚರಿಸಲಾಗುತ್ತಿದೆ.

ಈ ಯಾತ್ರೆಗೆ ಸಾವಿರಾರು ಮಂದಿ ತಮ್ಮ ಸಂಬಂಧಿಕರೊಂದಿಗೆ ಸಂಪ್ರದಾಯದಂತೆ ಎತ್ತಿನಗಾಡಿಗಳಲ್ಲಿ ತೆರಳುತ್ತಾರೆ. ಆಧುನಿಕ ಭರಾಟೆಗೆ ಸಿಲುಕಿ ಸಂಪ್ರದಾಯಗಳು ನಶಿಸಿಹೋಗುತ್ತಿರುವ ಸಂದರ್ಭದಲ್ಲೂ ಮಿಂಚೇರಿ ಯಾತ್ರೆ ಮಾತ್ರ ಗ್ರಾಮೀಣ ಸೊಗಡನ್ನು ಉಳಿಸಿಕೊಂಡಿರುವುದು ಬುಡಕಟ್ಟು ಸಂಸ್ಕೃತಿಯ ಗಟ್ಟಿತನವನ್ನು ಪ್ರತಿಬಿಂಬಿಸುತ್ತಿದೆ.

**ಮಿಂಚೇರಿ ಪಯಣ:** ತಾಲೂಕಿನ ಬಚ್ಚಬೋರನಹಟ್ಟಿಯಿಂದ ಮಿಂಚೇರಿ ಜಾತ್ರೆಗೆ ಪಯಣ ಆರಂಭವಾಗುತ್ತದೆ. ಇಲ್ಲಿ ಮ್ಯಾಸನಾಯಕ ಸಮುದಾಯದ ಆರಾಧ್ಯ ದೈವ ಗಾದ್ರಿಪಾಲ ನಾಯಕನ ದೇವಸ್ಥಾನವಿದೆ. ಮಿಂಚೇರಿಗೆ ಹೊರಡುವ ಹಿಂದಿನ ದಿನವೇ ಜಿಲ್ಲೆಯ ವಿವಿಧೆಡೆಗಳಿಂದ ಎತ್ತಿನಗಾಡಿಗಳಲ್ಲಿ ಬರುವ ಭಕ್ತರು ಇಲ್ಲಿ ಬೀಡು ಬಿಡುತ್ತಾರೆ. ಇಲ್ಲಿಂದ ಹೊರಡುವ ಸಮಯದಲ್ಲಿ ಊಟಕ್ಕೆ ಬೇಕಾದ ಆಹಾರ ಪದಾರ್ಥಗಳನ್ನು ಕೊಂಡಯ್ಯುತ್ತಾರೆ.

**ಆರು ದಿನಗಳ ಮಿಂಚೇರಿ ಜಾತ್ರೆ:** ಈ ಬಾರಿಯ ಮಿಂಚೇರಿ ಜಾತ್ರಾ ಮಹೋತ್ಸವ 2023ರ ಡಿಸೆಂಬರ್ 23 ರಿಂದ 28 ರವರೆಗೆ ಜರುಗಲಿದೆ. ಈ ಮಿಂಚೇರಿ ಜಾತ್ರೆಯಲ್ಲಿ ವಿಶಿಷ್ಟ ಆಚರಣೆಯನ್ನು ಕಾಣಬಹುದಾಗಿದ್ದು, ಬುಡಕಟ್ಟು ಸಂಸ್ಕೃತಿಯ ವೈಭವಕ್ಕೆ ಸಾಕ್ಷಿಯಾಗಲಿದೆ.

ಡಿಸೆಂಬರ್ 23ರಂದು ಶನಿವಾರ ಉದಯ ಕಾಲಕ್ಕೆ ದೇವರ ಮುತ್ತಯ್ಯಗಳ ಆಗಮನವಾದ ನಂತರ ಬೆಳಿಗ್ಗೆ 7ಕ್ಕೆ ದೇವರ ಮಜ್ಜನಬಾವಿಯಲ್ಲಿ ಗುರು–ಹಿರಿಯರೊಂದಿಗೆ ಗಂಗಾಪೂಜೆ ಹಾಗೂ ಬೆಳಿಗ್ಗೆ 11.30ಕ್ಕೆ ಮಿಂಚೇರಿ ಜಾತ್ರಾ ಮಹೋತ್ಸವ ಆರಂಭವಾಗಲಿದೆ. ದೇವರ ಮುತ್ತಯ್ಯಗಳೊಂದಿಗೆ ಊರಿನಿಂದ ನಿರ್ಗಮಿಸಿ ಅಲ್ಲಿಂದ ಕಕ್ಕಲು ಬೆಂಚಲ್ಲಿ ಪೂಜೆ ಸಲ್ಲಿಸಿ, ಯಾತ್ರೆ ಮುಂದುವರೆಯುವುದು. ಶನಿವಾರ ಸಂಜೆ 7ಕ್ಕೆ ಕ್ಯಾಸಾಪುರದ ಬಯಲಿನಲ್ಲಿ ಸ್ವಾಮಿಗೆ ಪೂಜೆ ನಂತರ ಬೀಡು ಬೀಡುವುದು. ನಂತರ ರಾತ್ರಿ ಭಜನೆ, ಕೋಲಾಟ, ಸೋಬಾನೆ, ಸಾಂಸ್ಕೃತಿಕ ಕಾರ್ಯಕ್ರಮ ನಡೆಯುವುದು.

ಡಿ:24ರಂದುಬೆಳಿಗ್ಗೆ7ಕ್ಕೆಸಕಲಸದ್ಭಕ್ತರಿಂದಸ್ವಾಮಿಯ ಪೂಜೆ ನಂತರ ಯಾತ್ರೆ ಮುಂದುವರೆಯುವುದು. ಮಧ್ಯಾಹ್ನ 12ಕ್ಕೆ ಸಿರಿಗೆರೆ ಡಿ.ಮದಕರಿಪುರ ವರತಿನಾಯಕನ ಕೆರೆಯ ದಂಡೆಯಲ್ಲಿ ವಿಶ್ರಾಂತಿ. ನಂತರ ಕೆರೆಯ ದಂಡೆಯಲ್ಲಿ ಪೂಜೆ ಮುಗಿಸಿಕೊಂಡು ಪಶುಪಾಲಕರಾದ ಗಾದ್ರಿಪಾಲನಾಯಕ ಸ್ವಾಮಿಯ ಸುಕ್ಷೇತ್ರ ಮಿಂಚೇರಿಗೆ ಪಯಣ ಬೆಳೆಸುತ್ತಾರೆ.


ಪುಟ ↘ 2





ನಮ್ಮ ಜನ
NAMMA JANA



| ಚಿನ್ನದ ಬೆಲೆ | |
|---|---|
| 91.6 ಕೆಡಿಎಂ (ಗ್ರಾಂ) | 5750 |
| 85 ಕೆಡಿಎಂ (ಗ್ರಾಂ) | 5330 |



| ಬೆಳ್ಳಿ ಬೆಲೆ | |
|---|---|
| ಕೆಜಿ | 67000 |



## ಫಾಸ್ಟ್ ನ್ಯೂಸ್

### ಮಕ್ಕಳಿಂದ ಶೌಚಾಲಯ ಕ್ಲೀನಿಂಗ್ ಕೇಸ್, ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ: ಸಿಎಂ

» **ಬೆಂಗಳೂರು**

ಶಾಲಾ ವಿದ್ಯಾರ್ಥಿಗಳಿಂದ ಶೌಚಾಲಯ ಕ್ಲೀನಿಂಗ್ ಪ್ರಕರಣ ಸಂಬಂಧ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮಕ್ಕೆ ಸಿಎಂ ಸಿದ್ದರಾಮಯ್ಯ ಸೂಚನೆ ನೀಡಿದ್ದಾರೆ.ಶಾಲೆಯ ಶೌಚಾಲಯಗಳನ್ನು ಶುಚಿಗೊಳಿಸಲು ವಿದ್ಯಾರ್ಥಿಗಳನ್ನು ಬಳಸುವುದು ಅತ್ಯಂತ ಹೀನ ಕೃತ್ಯ. ಇತ್ತೀಚೆಗೆ ಇಂತಹ ಪ್ರಕರಣಗಳು ವರದಿಯಾಗುತ್ತಿದ್ದು ಇದನ್ನು ಸಹಿಸಲು ಸಾಧ್ಯ ಇಲ್ಲ. ಈಗಾಗಲೇ ವರದಿಯಾಗಿರುವ ಪ್ರಕರಣಗಳಿಗೆ ಸಂಬಂಧಿಸಿದಂತೆ ಶಿಕ್ಷಣ ಇಲಾಖೆಯ ಅಧಿಕಾರಿಗಳು ತಪ್ಪಿತಸ್ಥ ಶಿಕ್ಷಕರ ವಿರುದ್ಧ ಸೂಕ್ತ ಕ್ರಮಕೈಗೊಂಡಿದ್ದಾರೆ. ಇಂತಹ ಕೃತ್ಯಗಳು ಬೇರೆ ಶಾಲೆಗಳಲ್ಲಿ ನಡೆಯುತ್ತಿದ್ದರೆ ಅವುಗಳನ್ನು ಪತ್ತೆಹಚ್ಚಿ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮಕೈಗೊಳ್ಳುವಂತೆ ಪ್ರಾಥಮಿಕ ಶಿಕ್ಷಣ ಸಚಿವರಿಗೆ ಸೂಚನೆ ನೀಡಿದ್ದೇನೆ. ಶಾಲೆ-ಕಾಲೇಜುಗಳ ಹಾಸ್ಟೆಲ್ಗಳಲ್ಲಿಯೂ ಈ ಬಗ್ಗೆ ನಿಗಾವಹಿಸುವಂತೆ ಸಮಾಜ ಕಲ್ಯಾಣ ಸಚಿವರಿಗೂ ತಿಳಿಸಿದ್ದೇನೆ.ಪ್ರತಿಯೊಂದುಶಾಲೆಯಲ್ಲಿಯೂಗಂಡು ಮತ್ತು ಹೆಣ್ಣು ಮಕ್ಕಳಿಗೆ ಪ್ರತ್ಯೇಕ ಶೌಚಾಲಯದ ವ್ಯವಸ್ಥೆ ಇರಬೇಕು ಮತ್ತು ಅವುಗಳನ್ನು ಪ್ರತಿದಿನ ಶುಚಿಗೊಳಿಸಲು ಸಿಬ್ಬಂದಿಯನ್ನು ನೇಮಕ ಮಾಡಬೇಕು. ಈ ಬಗ್ಗೆ ಒಂದು ಸಮೀಕ್ಷೆ ನಡೆಸಿ ಜಿಲ್ಲಾ ಶಿಕ್ಷಣಾಧಿಕಾರಿಗಳಿಂದ ವರದಿ ತರಿಸುವಂತೆ ಪ್ರಾಥಮಿಕ ಶಿಕ್ಷಣ ಸಚಿವರಿಗೆ ತಿಳಿಸಿದ್ದೇನೆ ಎಂದು ಸಿಎಂ ಸಿದ್ದರಾಮಯ್ಯ ಎಕ್ಸ್ ನಲ್ಲಿ ಪೋಸ್ಟ್ ಮಾಡಿದ್ದಾರೆ.

### ವೈಕುಂಠ ಏಕಾದಶಿ ವಿಶೇಷ ಪೂಜೆ ಸಲ್ಲಿಕೆ



» **ಮೊಳಕಾಲ್ಮುರು**

ಪಟ್ಟಣದ ಪಾಂಡು ರಂಗಸ್ವಾಮಿ, ವೆಂಕಟೇಶ್ವರ ಹಾಗೂ ಮಾರ್ಕಂಡೇಯ ದೇವಸ್ಥಾನಗಳಲ್ಲಿ ವೈಕುಂಠ ಏಕಾದಶಿ ಪ್ರಯುಕ್ತ ಶನಿವಾರದಂದು ವಿಶೇಷ ಪೂಜೆ ಸಲ್ಲಿಸಲಾಯಿತು.ವೆಂಕಟೇಶ್ವರ ಸ್ವಾಮಿ ದೇವಸ್ಥಾನದಲ್ಲಿ ವೈಕುಂಠ ದ್ವಾರದ ಮೂಲಕ ಭಕ್ತರು ಹೊರ ಹೋಗುವ ವ್ಯವಸ್ಥೆ ಮಾಡಲಾಗಿತ್ತು. ಪಾಂಡು ರಂಗಸ್ವಾಮಿ ಸ್ವಾಮಿ ದೇವಸ್ಥಾನದಲ್ಲಿ ದೇವರ ಉತ್ಸವ ಮೂರ್ತಿಗಳನ್ನು ತೊಟ್ಟಿಲಲ್ಲಿ ಕೂರಿಸಿದ್ದು, ಭಕ್ತರು ಈ ತೊಟ್ಟಿಲ ಕೆಳಭಾಗದಿಂದ ತೆರಳುವ ವ್ಯವಸ್ಥೆ ಮಾಡಲಾಗಿತ್ತು. ಭಕ್ತರಿಗೆ ಗರ್ಭಗುಡಿ ಪ್ರವೇಶಿಸಿ ಸ್ವಾಮಿಯನ್ನು ಮುಟ್ಟಿ ನಮಸ್ಕರಿಸಲು ಅವಕಾಶ ಕಲ್ಪಿಸಲಾಗಿತ್ತು. ವೆಂಕಟೇಶ್ವರ ಸ್ವಾಮಿಯನ್ನು ಬೆಳ್ಳಿ ಆಭರಣಗಳಿಂದ ಆಕರ್ಷಕವಾಗಿ ಅಲಂಕರಿಸಲಾಗಿತ್ತು. ಪಾಂಡುರಂಗಹಾಗೂ ರುಕ್ಕುವಾಯ ವಿಗಹಗಳನ್ನು ವಿಶೇಷವಾಗಿ ಅಲಂಕರಿಸಿದ್ದು, ಬೆಳಿಗ್ಗೆಯಿಂದಲೇ ಭಕ್ತರು ಆಗಮಿಸಿ ಗರ್ಭಗುಡಿಯಲ್ಲಿನ ಜೋಡಿ ದೇವರುಗಳನ್ನು ಮುಟ್ಟಿ ನಮಸ್ಕರಿಸುತ್ತಾ ಧನ್ಯತಾ ಭಾವ ಬದರ್ಶಿಸುತ್ತಿದ್ದದ್ದು ಕಂಡು ಬಂತು. ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೂ ವೆಂಕಟೇಶ್ವರ ಸ್ವಾಮಿ ಹಾಗೂ ಪಾಂಡುರಂಗ ಸ್ವಾಮಿ ದೇವಸ್ಥಾನದಲ್ಲಿ ಭಕ್ತರು ಸರದಿಯಲ್ಲಿ ನಿಂತು ದೇವರ ದರ್ಶನ ಪಡೆದರು.

### ಡಿ.25 ರಂದು ಅಶೋಕ ವಾಚನಾಲಯದ ಶತಮಾನೋತ್ಸವ

» **ಹೊಸದುರ್ಗ**

1963 ರಲ್ಲಿ ಸ್ಥಾಪನೆಯಾಗಿದ್ದ ಪಟ್ಟಣದ ಅಶೋಕ ವಾಚನಾಲಯ ಮತ್ತು ಮನರಂಜನ ಕೇಂದ್ರ ಡಿ.25 ರಂದು ಸೋಮವಾರ ಶತಮಾನೋತ್ಸವ ಸಂಬ್ರಮಾಚರಣೆಗೆ ಸಿದ್ದಗೊಂಡಿದೆ ಎಂದು ಅಶೋಕ ವಾಚನಾಲಯ ಮತ್ತು ಮನರಂಜನಾ ಕೇಂದ್ರದ ಕಾರ್ಯದರ್ಶಿ ಎಂ.ತಿಪ್ಪೇಸ್ವಾಮಿ ತಿಳಿಸಿದ್ದಾರೆ.ಪಟ್ಟಣದ ಅಶೋಕ ವಾಚನಾಲಯ ಮತ್ತು ಮನರಂಜನ ಕೇಂದ್ರದ ಕಛೇರಿಯಲ್ಲಿ ಸೋಮವಾರ ಆಯೋಜಿಸಲಾಗಿದ್ದ ಸುದ್ದಿ ಗೋಷ್ಟಿಯನ್ನುದ್ದೇಶಿಸಿ ಮಾತನಾಡಿದರು.ಡಿ.25 ರಂದು ಸೋಮವಾರ ಬೆಳಿಗ್ಗೆ 11.30 ಕ್ಕೆ ಪಟ್ಟಣದ ಅಶೋಕ ರಂಗ ಮಂದಿರದಲ್ಲಿ "ಶತಮಾನೋತ್ಸವ ಸಂಬ್ರಮದ ಸಮಾರಂಭನ್ನ ಆಯೋಜಿಸಲಾಗಿದ್ದು ಮನರಂಜನಾ ಕೇಂದ್ರದ ಅಧ್ಯಕ್ಷರಾದ ಹೆಚ್.ಬಿ.ಮರಿಯಪ್ಪನವರು ಅಧ್ಯಕ್ಷತೆ ವಹಿಸಲಿದ್ದು ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ಸಚಿವ ಡಿ.ಸುಧಾಕರ್ ಸಮಾರಂಭವನ್ನ ಉದ್ಘಾಟಿಸಲಿದ್ದು ಚಳ್ಳಕೆರೆ ಶಾಸಕ ಟಿ.ರಘುಮೂರ್ತಿ ದಶಮಾನೋತ್ಸವ ನಾಮಫಲಕ ಉದ್ಘಾಟನೆ ಮಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಮನರಂಜನಾ ಕೇಂದ್ರದ ಗೌರವಾಧ್ಯಕ್ಷ ಹಾಗೂ ಶಾಸಕಬಿ.ಜಿ.ಗೋವಿಂದಪ್ಪ,ಮಾಜಿಶಾಸಕರುಗಳಾದ ಇಲ್ಕಲ್‌ವಿಜಯಕಕುಮಾರ್,ಟಿ.ಹೆಚ್.ಬಸವರಾಜ್ ಭಾಗವಹಿಸಲಿದ್ದು ಇದೇ ಕಾರ್ಯಕ್ರಮದಲ್ಲಿ ಮನರಂಜನಾ ಕೇಂದ್ರದ ಮಾಜಿ ಅಧ್ಯಕ್ಷರುಗಳು ಹಾಗೂ ಕಾರ್ಯದರ್ಶಿಗಳಾದ ಹಚಿಜಿಶಿವಸ್ವಾಮಿ, ಟಿ.ಡಿ.ಲಕ್ಷ್ಮಣ್, ಎ.ಎನ್.ಸೂರ್ಯನಾರಾಯಣ ಶೆಟ್ಟಿ ಉಪಸ್ಥಿತರಿದ್ದರು.

# ಅತಿಥಿಗಳ ಸೇವೆಯೇ ನಿಜವಾದ ಸೇವೆ

## ಪ್ರವಾಸೋದ್ಯಮದ ಅಭಿವೃದ್ಧಿಗೆ ಹೋಟೆಲ್ ಉದ್ಯಮದ ಆತಿಥ್ಯ ಬಹಳ ಮುಖ್ಯ -ಮೈಸೂರಿನ ಅಭಿವೃದ್ಧಿಗೆ ಸರ್ಕಾರ ಬದ್ಧ: ಸಿಎಂ

» **ಮೈಸೂರು**

ಸರ್ಕಾರ ಮೈಸೂರಿನ ಅಭಿವೃದ್ಧಿಗೆ ಬದ್ಧವಾಗಿದೆ. ಮೈಸೂರಿನ ಅಭಿವೃದ್ಧಿ, ಪ್ರವಾಸೋದ್ಯಮ, ಸಾಂಸ್ಕೃತಿಕ ನಗರವಾಗಿ ಅಭಿವೃದ್ಧಿಗೊಳಿಸುವ ದೃಷ್ಟಿಯಿಂದ ಎಲ್ಲ ಕ್ರಮಗಳನ್ನು ಕೈಗೊಳ್ಳಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಅವರು ಇಂದು ಹೋಟೆಲ್ ಮಾಲೀಕರ ಪತ್ತಿನ ಸಹಕಾರ ಸಂಘ ರಜತ ಮಹೋತ್ಸವ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು.

ಹೋಟೆಲ್ ಮಾಲೀಕರ ಪತ್ತಿನ ಸಹಕಾರ ಸಂಘ ಪ್ರಾರಂಭವಾದಾಗ ಉದ್ಘಾಟಿಸಿ, ಇಂದು ರಜತ ಮಹೋತ್ಸವವನ್ನು ನಾನೇ ಉದ್ಘಾಟಿಸಿರುವುದು ಸಂತೋಷ ತಂದಿದೆ. ಈ ಸಂಘ ಶತಮಾನೋತ್ಸವವನ್ನೂ ಆಚರಿಸಲಿ ಎಂದು ಶುಭ ಹಾರೈಸಿದ ಮುಖ್ಯಮಂತ್ರಿಗಳು ಹೋಟೆಲ್ ನವರಿಗೂ ನನಗೂ ಅವಿನಾಭಾವ ಸಂಬಂಧವಿದೆ. ನಾನು ವ್ಯಾಸಂಗ




ಮಾಡುತ್ತಿದ್ದ ಸಂದರ್ಭದಲ್ಲಿ ಊಟಕ್ಕಾಗಿ ಹೋಟೆಲ್ ನ್ನೇ ನೆಚ್ಚಿಕೊಂಡಿದ್ದೆ. ನಾನ್ ವೆಜ್ ಊಟ ಹೆಚ್ಚು ಪ್ರಿಯವಾಗಿದ್ದು, ಅಂತಹ ಹೋಟೆಲ್ ಗಳಿಗೆ ಹೆಚ್ಚು ಭೇಟಿ ನೀಡುತ್ತಿದ್ದುದ್ದನ್ನು ಸ್ಮರಿಸಿಕೊಂಡರು.

**ಅತಿಥಿ ದೇವೋ ಭವ :** ಮೈಸೂರು ಪ್ರವಾಸೋದ್ಯಮದ ಕೇಂದ್ರ. ಅತಿಥಿ ದೇವೋ ಭವ ಎಂಬ ಭಾರತೀಯ ಸಂಸ್ಕೃತಿಯಂತೆ ಅತಿಥಿಗಳನ್ನು ದೇವರಂತೆ ಕಂಡು ಆತಿಥ್ಯ ನೀಡಬೇಕು. ತಲೆಮಾರುಗಳಿಂದ ಹೋಟೆಲ್ ಉದ್ಯಮವನ್ನು ಹಲವು ದಶಕಗಳ ನಡೆಸಿಕೊಂಡು ಬಂದ ಸಾಧಕರಿದ್ದಾರೆ. ಅತಿಥಿಗಳ ಸೇವೆಯೇ ನಿಜವಾದ ಸಮಾಜ ಸೇವೆ. ಪ್ರವಾಸೋದ್ಯಮಕ್ಕೆ ಚೈತನ್ಯ ತುಂಬಲು ಹಾಗೂ ಜನರ ಕೈಗೆ ದುಡ್ಡನ್ನು ನೀಡುವಂತಹ ಯೋಜನೆಗಳನ್ನು ಸರ್ಕಾರ ಜಾರಿಗೊಳಿಸಿದೆ. ಪ್ರವಾಸಿಗರು ಹೆಚ್ಚಾದಾಗ ಅಲ್ಲಿನ ಹೋಟೆಲ್ ಗಳಿಗೂ ಬೇಡಿಕೆ ಹೆಚ್ಚಾಗುತ್ತದೆ. ಇದರಿಂದ ರಾಜ್ಯದ ಜಿಡಿಪಿ ಅಭಿವೃದ್ಧಿಯಾಗಲು ಸಹಕಾರಿ ಎಂದರು.

**ಜನರ ಕೈಯಲ್ಲಿ ದುಡ್ಡಿದ್ದರೆ ಆರ್ಥಿಕ ಚಟುವಟಿಕೆ ಹೆಚ್ಚುತ್ತದೆ:** ಜನರ ಕೈಯಲ್ಲಿ ದುಡ್ಡು ಇಲ್ಲದಿದ್ದರೆ ಜೀವನ ದುಸ್ತರವಾಗುತ್ತದೆ. ಆದ್ದರಿಂದ ಜನರ ಕೈಗೆ ದುಡ್ಡು ನೀಡಿದಾಗ, ಆರ್ಥಿಕ ಚಟುವಟಿಕೆ ವೃದ್ಧಿಯಾಗುತ್ತದೆ. 1.16 ಕೋಟಿ ಮಹಿಳೆಯರಿಗೆ ಗೃಹಲಕ್ಷ್ಮಿ ಯೋಜನೆಯಡಿ ತಲಾ 2000 ರೂ. ಗಳನ್ನು ನೀಡಲಾಗುತ್ತಿದೆ. ಮೈಸೂರನ್ನು ಪ್ರವಾಸಿ ಕೇಂದ್ರವಾಗಿಸಲು ಸರ್ಕಾರ ಎಲ್ಲ ರೀತಿಯ ಸಹಕಾರವನ್ನು ನೀಡಲಿದೆ. ಮೈಸೂರಿನಲ್ಲಿ ಫಿಲ್ಮ ಸಿಟಿ ಸ್ಥಾಪಿಸಿ ಬಜೆಟ್ ನಲ್ಲಿ ಘೋಷಿಸಿದಂತೆ ಸ್ಥಾಪಿಸಲಾಗುವುದು. ನಾನು ಹಿಂದೆ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಮೈಸೂರಿನ ಅಭಿವೃದ್ಧಿಯನ್ನು ಕೈಗೊಳ್ಳಲಾಗಿತ್ತು. ಈಗ ಪುನ: ನಮ್ಮ ಸರ್ಕಾರ ಮೈಸೂರಿನ ಅಭಿವೃದ್ಧಿಗೆ ಬದ್ಧವಾಗಿದೆ ಎಂದರು.

# ರೈತರ ಜಮೀನುಗಳು ಬಡಾವಣೆ: ಬೇಸರ

» **ನಾಯಕನಹಟ್ಟಿ**

ನಮ್ಮ ದೇಶದ ಆಗಿನ ಕಾಲದಲ್ಲಿ ನೂರಕ್ಕೆ 75% ರೈತರು ಕೃಷಿಯನ್ನು ಅವಲಂಬಿತರಾಗಿದ್ದರು, ಈಗ 20% ಇಲ್ಲ ಎಂಬುವುದು ಎದ್ದು ಕಾಣುತ್ತಿದೆ. ಇತ್ತೀಚೆಗೆ ರೈತರು ಹೊಲವನ್ನು ಈಗ ಬಡಾವಣೆಗಳನ್ನು ಮಾಡಿಕೊಳ್ಳುತ್ತಿದ್ದಾರೆ ಎಂದು ಜಾಗನೂರಹಟ್ಟಿ ಬಿ.ಟಿ. ಪ್ರಕಾಶ್ ಬೇಸರ ವ್ಯಕ್ತಿಪಡಿಸಿದರು.

ಪಟ್ಟಣದ ಮೈರಾಡ ಕಛೇರಿಯಲ್ಲಿ ಶನಿವಾರ ರೈತರ ದಿನಾಚರಣೆ, ಸಸಿಗೆ ನೀರು ಹಾಕುವ ಮೂಲಕ ಉದ್ಘಾಟಿಸಿ ಮಾತನಾಡಿದರು. ದೇಶದ ಕೆಲವು ರಾಜಕಾರಣಿಗಳು ಇಂದಿಗೂ ಚೌದರಿ ಚರಣ್ ಸಿಂಗ್‌ರವರನ್ನು ಜನಪ್ರಿಯ ಜನನಾಯಕನಾಗಿ ಗುರುತಿಸಿರುತ್ತಾರೆ.

ರೈತ ನಾಯಕ, ರೈತ ಪರ ಆಡಳಿತಗಾರ, ರೈತಪರ ಹೋರಾಟಗಾರರ ದೇಶದ 5ನೇ ಪ್ರಧಾನಮಂತ್ರಿ ಚೌದರಿ ಚರಣ್ ಸಿಂಗ್ ರವರ ಜನ್ಮದಿನವನ್ನು ರೈತರ ದಿವಸ್, ಕಿಸಾನ್ ದಿವಸ್ ರಾಷ್ಟ್ರೀಯ ರೈತ ದಿನಾಚರಣೆಯಾಗಿ ಆಚರಿಸಲಾಗುತ್ತದೆ ಎಂದರು.

ಒಬ್ಬ ನಿಷ್ಠಾವಂತ ಕೆಲಸಗಾರ ಮತ್ತು ಸಾಮಾಜಿಕ ನ್ಯಾಯಾಲಯದಲ್ಲಿ ಕಟ್ಟ ನಂಬಿಕೆವುಳ್ಳ ವ್ಯಕ್ತಿಯಾದ ಶ್ರೀ ಚರಣ್ ಸಿಂಗ್ ಅವರು ರೈತಪರ ಯೋಜಮೆಗಳು ಜಾರಿಗೆ ತಂದರು.



ನಾಯಕನಹಟ್ಟಿ ಹೋಬಳಿಯ ಕೃಷಿ ಅಧಿಕಾರಿ ಹೇಮಂತ್‌ನಾಯ್ಕ ಮಾತನಾಡಿ ನಮ್ಮ ದೇಶದ ಸೈನಿಕ ಮತ್ತು ರೈತ ಒಂದು ನಾಣ್ಯದ ಎರಡು ಮುಖ ಇದ್ದಂತೆ ಪ್ರತಿಯೊಬ್ಬ ರೈತರು ಸರ್ಕಾರಿ ಇತರೆ ಸೌಲಭ್ಯಗಳನ್ನು ಪಡೆದುಕೊಳ್ಳಲು ಎಫ್.ಐ.ಡಿ. ಕಡ್ಡಾಯವಾಗಿರುತ್ತದೆ. ಎಲ್ಲಾ ರೈತರು ಕಡ್ಡಾಯವಾಗಿ ತಮ್ಮ ಎಲ್ಲಾ ಜಮೀನುಗಳ ವಿವರಗಳನ್ನು ತಮ್ಮ ಎಫ್.ಐ.ಡಿ.ಗೆ ಸೇರಿಸಲು ಯಾವ ರೈತರು ಇಲ್ಲಿಯವರೆಗೂ ಎಫ್.ಐ.ಡಿ.ಯನ್ನು ಮಾಡಿಸಿಕೊಂಡಿಲ್ಲವೋ ಅವರು ತಮ್ಮ ಹತ್ತಿರದ ರೈತ ಸಂಪರ್ಕ ಕೇಂದ್ರ, ಮತ್ತು ನಾಗರೀಕ ಸೇವಾ ಕೇಂದ್ರಗಳನ್ನು ಸಂಪರ್ಕಿಸಿ ಎಂದರು.

ಈ ಸಂದರ್ಭದಲ್ಲಿ ತಿಪ್ಪೇರುದ್ರಸ್ವಾಮಿ ರೈತರ ಉತ್ಪಾದನಾ ಕಂಪನಿ ಲಿಮಿಟೆಡ್ ಅಧ್ಯಕ್ಷರಾದ ಸಿ.ಮಂಜುನಾಥ್, ಭಾಗ್ಯಮ್ಮ ಉಪಾಧ್ಯಕ್ಷರು, ಬಿ.ಜೆ. ಮರುಣಪ್ಪ, ಪಿ.ಓ.ತಿಪ್ಪೇಸ್ವಾಮಿ, ರಾಜಣ್ಣ, ಸಂಘದ ಮುಖ್ಯ ಅಧಿಕಾರಿ ಜೋಗಿಹಟ್ಟಿ ಹೆಚ್.ಬಿ. ತಿಪ್ಪೇಸ್ವಾಮಿ, ಎಸ್.ಓ. ತಿಪ್ಪೇಸ್ವಾಮಿ ಮಾಜಿ ತಾ.ಪಂ.ಸದಸ್ಯರು, ಮಲ್ಲೂರಹಟ್ಟಿ ಬಸಣ್ಣ, ಜಿ.ತಿಪ್ಪೇಸ್ವಾಮಿ,ಕೆ.ಪಿ.ತಿಪ್ಪೇಸ್ವಾಮಿ, ಪೂಜಾರಿ ತಿಪ್ಪೇಸ್ವಾಮಿ, ಸಣ್ಣಬೋರಜ್ಜ, ಬಿ.ಟಿ. ಪ್ರಕಾಶ್, ವೆಂಕಟೇಶ್, ಗೌಡಗೆರೆ ರಾಜು, ಧನಂಜಯ ಪತ್ರಕರ್ತ, ನಿವೃತ್ತ ಶ್ರೀನಿವಾಸ್ ಇದ್ದರು.

## ಪರಶುರಾಂಪುರದಲ್ಲಿ ರೈತರ ದಿನಾಚರಣೆ



» **ಪರಶುರಾಂಪುರ**

ಗ್ರಾಮದ ರೈತ ಸಂಪರ್ಕ ಕೇಂದ್ರದಲ್ಲಿ ಶನಿವಾರ ಆಯೋಜಿಸಿದ್ದಾ ರೈತರ ದಿನಾಚರಣೆ ಕಾರ್ಯಕ್ರಮವು ಜರುಗಿತು. ಈ ವೇಳೆಯಲ್ಲಿ ಗ್ರಾಪಂ ಅಧ್ಯಕ್ಷ ಜಗಲೂರುಸ್ವಾಮಿ ಮಾತನಾಡಿ , ರೈತರು ಬಿಡುವಿಲ್ಲದೆ ಶ್ರಮಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಾ , ಸದಾ ಭೂ ಮಾತೆಯನ್ನ ನಂಬಿ ಎಲ್ಲರ ಬದುಕಿಗೆ ದುಡಿಯುತ್ತಿರುವ ಅನ್ನದಾತ ಎಂದರು. ಕೃಷಿ ಅಧಿಕಾರಿ ಜೀವನ್ ಮಾತನಾಡಿ , ಅನ್ನದಾತನಿಗೆ ಗೌರವಸಲ್ಲಿಸುವುದು ಎಲ್ಲರ ಕರ್ತವ್ಯ ,ಅವರಿದ್ದರೇ ನಾವು ಆಗಾಗಿ ಹತ್ತು ಹಲವು ಮಾಹಿತಿ ಹಾಗೂ ಯೋಜನೆಗಳ ಜತೆ ಅವರ ಏಳ್ಗೆಗೆ ಸದಾ ಕೃಷಿ ಇಲಾಖೆ ಇರುವುದು ಎಂದರು. ಪ್ರಗತಿಪರ ರೈತ ನಾಗೇಂದ್ರಪ್ಪ ಮಾತನಾಡಿ , ಕೃಷಿಯಲ್ಲಿ ಹತ್ತಾರು ವೈಜ್ಞಾನಿಕ ಪದ್ಧತಿಯನ್ನ ಅಳವಡಿಸಿಕೊಂಡು ಮಿಶ್ರ ಬೆಳೆಗಳ ಮೂಲಕ ಸಮಾಜಮುಖಿಗೆ ಬರುವಂತೆ ಸಲಹೆ ನಿಡಿದರು. ಈ ವೇಳೆಯಲ್ಲಿ ಪ್ರಗತಿಪರ ರೈತರನ್ನ ಹಾಗೂ ಸಾಧಕರನ್ನ ವೇದಿಕೆಯಲ್ಲಿ ಗೌರವಿಸಲಾಯಿತು. ಸಂದರ್ಭದಲ್ಲಿ ಗ್ರಾಪಂ ಸದಸ್ಯ ನಾಗಭೂಷಣ , ಅಖಂಡ ರೈತ ಸಂಘದ ಹೋಬಳಿ ಘಟಕದ ಅಧ್ಯಕ್ಷ ನವೀನ್ , ವೆಂಕಟರಮಣಪ್ಪ , ತಾಲೂಕಿನ ಪ್ರಧಾನ ಕಾರ್ಯದರ್ಶಿ ಪ್ರಕಾಶ್ , ಉಪಾಧ್ಯಕ್ಷ ಜಂಪಣ್ಣ , ಗೌರವಾಧ್ಯಕ್ಷ ಹನಮಂತರಾಯಪ್ಪ , ಬೋಪ್ಪಣ್ಣ , ಭಾಷಣ್ಣ , ಪಿಪಿಎಲ್ ಸೂರಜ್ , ಗೋಸಿಕೆರೆ ರಾಜಣ್ಣ , ಮಲ್ಲಿಕಾರ್ಜುನ ,ಚೌಳೂರು ದೇವರಾಜ , ವಿವಿಧ ಗ್ರಾಪಂಯ ಕೃಷಿ ಸಖಿಯರು , ಅನುವುಗಾರರು ಹಾಗೂ ರೈತ ಮುಖಂಡರ ಜತೆ ಗ್ರಾಮಸ್ಥರಿದ್ದರು.

# ಸೇತುವೆ ಕಾಮಗಾರಿ ಪ್ರಾರಂಭಕ್ಕಾಗಿ ಸಂಘದಿಂದ ಪ್ರತಿಭಟನೆ

» **ಪರಶುರಾಂಪುರ**

ಪರಶುರಾಂಪುರ-ಪಾವಗಡ ರಸ್ತೆಯಲ್ಲಿ ಬರುವ ಸೇತುವೆ ಕಾಮಗಾರಿ ವಿಳಂಬವಾಗಿ ಅಲ್ಲಿನ ನಿವಾಸಿಗಳ ಜತೆ ಸಾರ್ವಜನಿಕರಿಗೆ ತೊಂದರೆ ಉಂಟಾಗಿದೆ ಎಂದು ಅಖಂಡ ಕರ್ನಾಟಕ ರಾಜ್ಯ ರೈತ ಸಂಘದವರು ಶನಿವಾರ ಪ್ರತಿಭಟನೆ ನಡೆಸಿದರು.

ಕಳೆದ ಸಲದ ಮಳೆಗೆ ಗ್ರಾಮದ ಹಳೆ ಕೆರೆ ಕೋಡಿಬಿದ್ದು ಆ ನೀರಿನ ರಭಸಕ್ಕೆ ಸೇತುವೆ ಶಿಥಿತವಾಗಿತ್ತು. ನೂತನ ಸೇತುವೆ ಕಾಮಗಾರಿಗೆ ಚಾಲನೆಯು ಸಹಾ ಸಿಕ್ಕಿತ್ತು. ಆದರೆ ಹಳೆ ಸೇತುವೆ ಕಿತ್ತು ಬಹಳ ದಿನಗಳಾದರೂ ಸಂಬಂಧ ಪಟ್ಟ ಇಲಾಕೆಯವರು ಆರಂಭ ಮಾಡುವ ಕಾರ್ಯಕ್ಕೆ ಮುಂದಾಗಿಲ್ಲಾ



, ಇಲ್ಲಿನ ದೂಳಿನ ಹಾಗೂ ಸ್ಥಳದಲ್ಲಿ ನಿಂತ ನೀರಿನ ವಾಸನೆ ,ಸೊಳ್ಳೆಗಳ ಸಮಸ್ಯೆಗಳಿಗೆ ಆರೋಗ್ಯ ಹದಗೆಟ್ಟು ಆಸ್ಪತ್ರೆ ಸೇರಿದ್ದಾರೆ , ಬೇಗ ಪ್ರಾರಂಭಿಸಿ ಮುಗಿಸುವಂತೆ ಮನವಿ ಮಾಡಿದರೂ ಯಾವ ಪ್ರಯೋಜನವಾಗುತ್ತಿಲ್ಲಾ ಎಂದು ಪ್ರತಿಭಟನಕಾರರುಆರೋಪಿಸಿದರು. ಪ್ರತಿಭಟನೆ ಎಂದದಾಗ ಅಗೋಮ್ಮೆ ಈಗೊಮ್ಮೆ ರಸ್ತೆಯ ದೂಳಿಗೆ ನೀರಾಕಿ ಕೈತೊಳೆದು ಕೊಳ್ಳುತ್ತಾ , ಕಾಮಗಾರಿ ಈ ವಾರ ,ಮುಂದಿನ ವಾರ ಎಂದು ಮುಂದೂಡುತ್ತಾ ಹೋಗುತ್ತಿದ್ದಾರೆ . ಆದರೆ ಅವರಿಗೆ ಏನಾಗುತ್ತೇ ಇದರ ಸಮಸ್ಯೆ ಎದುರಿಸುತ್ತಿರುವುದು ಇಲ್ಲಿನ ನಿವಾಸಿಗಳ ಜತೆ ವಾಹನ ಚಾಲನಕರು ಮಾತ್ರ ಎಂದು ಅಲ್ಲಿನ ನಿವಾಸಿಗಳ ಅಳಲು.

ಒಂದು ವಾರದೋಳಗೆ ಸೇತುವೆ ಕಾಮಗಾರಿಗೆ ಪ್ರಾರಂಭವಾಗದಿದ್ದರೆ, ಬೃಹತ್ ಪ್ರತಿಭಟನೆಯನ್ನ ಮಾಡಲಾಗುವುದು ಎಂದು ಅಖಂಡ ಕರ್ನಾಟಕ ರಾಜ್ಯ ಸಂಘದ ಪಾದಧಿಕಾರಿಗಳು ಪ್ರತಿಕೆಯ ಮೂಲಕ ಒತ್ತಾಯಿಸಿದ್ದಾರೆ.

ಅಖಂಡರೈತಸಂಘದ ಹೋಬಳಿ ಘಟಕದ ಅಧ್ಯಕ್ಷ ನವೀನ್ , ತಾಲೂಕಿನ ಪ್ರಧಾನ ಕಾರ್ಯದರ್ಶಿ ಪ್ರಕಾಶ್ , ಉಪಾಧ್ಯಕ್ಷ ಜಂಪಣ್ಣ , ಗೌರವಾಧ್ಯಕ್ಷ ಹನಮಂತರಾಯಪ್ಪ , ಭಾಷಣ್ಣ , ಅಣ್ಣಪ್ಪ , ರತ್ನಪ್ಪ , ಹಾಗೂ ರೈತ ಮುಖಂಡರು , ಸ್ಥಳೀಯರು ಇದ್ದರು.

## ಡಿ.30ರಂದು ಮೊಳಕಾಲ್ಮುರಿನಲ್ಲಿ ತಾಲ್ಲೂಕುಮಟ್ಟದ ಜನತಾ ದರ್ಶನ

» **ಚಿತ್ರದುರ್ಗ**

ಜಿಲ್ಲಾಧಿಕಾರಿ ದಿವ್ಯಪ್ರಭು ಜಿಆರ್‌ಜೆ ನೇತೃತ್ವದಲ್ಲಿ ಇದೇ ಡಿಸೆಂಬರ್ 30ರಂದು ಬೆಳಿಗ್ಗೆ 10.30ಕ್ಕೆ ಮೊಳಕಾಲ್ಮುರು ಪಟ್ಟಣದ ಗುರುಭವನದಲ್ಲಿ ತಾಲ್ಲೂಕು ಮಟ್ಟದ "ಜನತಾ ದರ್ಶನ"ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಜಿಲ್ಲಾ ಉಸ್ತುವಾರಿ ಸಚಿವರ ನೇತೃತ್ವದಲ್ಲಿ ಪ್ರತಿ ತಿಂಗಳು ಜಿಲ್ಲಾ ಮಟ್ಟದ ಜನತಾ ದರ್ಶನ ಕಾರ್ಯಕ್ರಮ ಹಾಗೂ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಪ್ರತಿ 15 ದಿನಗಳಿಗೊಮ್ಮೆ ತಾಲ್ಲೂಕು ಮಟ್ಟದ ಜನತಾ ದರ್ಶನ ಕಾರ್ಯಕ್ರಮ ಹಮ್ಮಿಕೊಂಡು, ಜನರ ಅಹವಾಲು ಆಲಿಸಿ ಸಮಸ್ಯೆಗಳಿಗೆ ಪರಿಹಾರೋಪಾಯಗಳನ್ನು ಒದಗಿಸುವ ನಿಟ್ಟಿನಲ್ಲಿ ಸೂಕ್ತ ಕ್ರಮವಹಿಸಲಾಗುತ್ತದೆ.

## ಪ್ರಮುಖ ಸುದ್ದಿ

# ಎತ್ತಿನ ಗಾಡಿ ಏರೋಣ, ಮಿಂಚೇರಿ ಯಾತ್ರೆ ಮಾಡೋಣ

» **ಮೊದಲ ಪುಟದಿಂದ**

ಸಂಜೆ 5ಕ್ಕೆ ಸ್ವಾಮಿಯ ಮೀಸಲು ಹಾಲಿನ ಕಂಬಿಯ ಪೂಜೆ. ರಾತ್ರಿ ಗುರು-ಹಿರಿಯರ ಸಾಂಪ್ರದಾಯಿಕ ಪೂಜೆ ನಂತರ ಬೀಡು ಬಿಡಲಾಗುವುದು. ಮಧ್ಯರಾತ್ರಿ ಕಂಚವ್ವ ಕಾಮವ್ವರ ಚಿಲುಮೆ ಗಂಗಮ್ಮನ ಮಹಾಪೂಜೆ. ಕೋಲಾಟ, ಭಜನೆ, ಸೋಬಾನೆ ಹಾಗೂ ಇತರೆ ಕಾರ್ಯಕ್ರಮಗಳು ನಡೆಯುತ್ತವೆ.

ಡಿಸೆಂಬರ್ 25ರಂದು ಬೆಳಿಗ್ಗೆ 5ಕ್ಕೆ ಸ್ವಾಮಿಯ ಪೂರ್ವಿಕರ ವಿಧಿ-ವಿಧಾನಗಳೊಂದಿಗೆ ಹುಲಿರಾಯನ ಸಮಾಧಿಗೆ ಪೂಜೆ. ನಾಯಕನ ಸಮಾಧಿಗೆ ಪೂಜೆ ಹಾಗೂ ಮಣಿವು ಕಾರ್ಯಕ್ರಮ. ನಂತರ ಮಧ್ಯಾಹ್ನ 2ಕ್ಕೆ ಸ್ವಾಮಿಯ ಸನ್ನಿಧಿಯಲ್ಲಿ ಬಸವಂತರಿಗೆ ಹಾಗೂ ಚೌಕು ಮಣೆವು ಕಾರ್ಯಕ್ರಮ. ಸಂಜೆ 4ಕ್ಕೆ ಕಣಿವೆ ಮಾರಮ್ಮ, ಮಲಿಯಮ್ಮ ಹಾಗೂ ಕೊಲ್ಲಪುರದಮ್ಮನವರ ಗಂಗಾಪೂಜೆ. ಸಂಜೆ 7ಕ್ಕೆ ಸ್ವಾಮಿಗೆ ಪೂಜೆ ನಂತರ ಭಕ್ತಾಧಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ.


ಡಿಸೆಂಬರ್ 26ರಂದು ಬೆಳಿಗ್ಗೆ 7ಕ್ಕೆ ಸ್ವಾಮಿಯು ಜಂಗಮ ಸ್ವರೂಪಿಯಾಗಿ





ಭಿಕ್ಷೆ ಸ್ವೀಕಾರ ಕಾರ್ಯಕ್ರಮ. ಬೆಳಿಗ್ಗೆ 11ಕ್ಕೆ ಸ್ವಾಮಿಯ ಸನ್ನಿಧಿಯಲ್ಲಿ ಪ್ರಸಾದ ದಾಸೋಹ. ಮಧ್ಯಾಹ್ನ 2ಕ್ಕೆ ಮಿಂಚೇರಿ ಸುಕ್ಷೇತ್ರದಿಂದ ನಿರ್ಗಮನ. ರಾತ್ರಿ 7ಕ್ಕೆ ಕಡ್ಲೇಗುದ್ದು ಬಳಿಯ ಸಿದ್ದರ ಗುಂಡಿಗೆ ಆಗಮನ. ನಂತರ ಸ್ವಾಮಿಗೆ ಪೂಜೆ ಸಲ್ಲಿಸಿ ಬೀಡು ಬಿಡುವುದು.

ಡಿಸೆಂಬರ್ 27ರಂದು ಬೆಳಿಗ್ಗೆ 7ಕ್ಕೆ ಸ್ವಾಮಿಗೆ ಪೂಜೆ ಸಲ್ಲಿಸಿ ಬೆಳಿಗ್ಗೆ 10ಕ್ಕೆ ಕ್ಯಾಸಾಪುರ ಹತ್ತಿರ ಜನಿಗಿಹಳ್ಳದ ದಂಡೆಯಲ್ಲಿ ವಿಶ್ರಾಂತಿ ಮತ್ತು ಸ್ವಾಮಿಯ ಸಂಪ್ರಾದಾಯದಂತೆ ಜನಿಗಿ ಹಳಕ್ಕೆ ಗಂಗಾಪೂಜೆ ನಡೆಯುತ್ತದೆ. ನಂತರ ಯಾತ್ರೆ ಮುಂದುವರೆಯಲಿದೆ.



ಮಧ್ಯಾಹ್ನ 2ಕ್ಕೆ ಗಂಡುಮೆಟ್ಟಿದ ನಾಡು ಚಿತ್ರದುರ್ಗಕ್ಕೆ ಮಿಂಚೇರಿ ಮಹೋತ್ಸವದ ಮೆರವಣಿಗೆ ಆಗಮನ. ನಂತರ ರಾಜಾ ಬೀದಿಗಳಲ್ಲಿ ಸ್ವಾಮಿಯ ಮೆರವಣಿಗೆ, ಕೋಲಾಟ, ಭಜನೆ, ಉರುಮೆ, ಕುಣಿತ, ತಮಟೆ, ವಾದ್ಯಗಳೊಂದಿಗೆ ಕಹಳೆಯ ನಾದದೊಂದಿಗೆ ಜನಪದ ನೃತ್ಯಗಳೊಂದಿಗೆ ಭವ್ಯ ಮೆರವಣಿಗೆ ನಡೆಯಲಿದೆ. ಸಂಜೆ 7ಕ್ಕೆ ಸುಕ್ಷೇತ್ ಕಕ್ಕಲು ಬೆಂಚಿನಲ್ಲಿ ಬೀಡು ಬಿಡುವುದು. ಡಿಸೆಂಬರ್ 28ರಂದು ಸಂಜೆ 7ಕ್ಕೆ ಸ್ವಾಮಿಯ ಗ್ರಾಮದ ಹೊಸ್ತಿಲು ಪೂಜೆಯೊಂದಿಗೆ ಸ್ವಸ್ಥಾನಕ್ಕೆ ಮರಳುವುದು. ಗುರು-ಹಿರಿಯರೊಂದಿಗೆ ದೇವರ ಮುತ್ತಯ್ಯಗಳ ಬೀಳ್ಕೊಡುಗೆ ನಡೆಯಲಿದೆ.

**100 ಕ್ಕೂ ಹೆಚ್ಚು ಎತ್ತಿನ ಗಾಡಿ:** ಪ್ರತಿ ಐದು ವರ್ಷಗಳಿಗೊಮ್ಮೆ ನಡೆಯುವ ಸಾಲು ಎತ್ತು ಗಾಡಿಗಳ ಮಿಂಚೇರಿ ಯಾತ್ರೆಯಲ್ಲಿ ಈ ಬಾರಿ ಸುಮಾರು 100 ಕ್ಕಿಂತ ಹೆಚ್ಚು ಎತ್ತಿನ ಗಾಡಿಗಳು, 140 ಟ್ರಾಕ್ಟರ್, 69 ಟೆಂಪೋ ಗಳನ್ನು ಹೂವುಗಳ ಮೂಲಕ ಶೃಂಗಾರ ಮಾಡಿಕೊಂಡು ಯಾತ್ರೆ ಹೊರಟರು. 35-40 ಕಿ.ಮೀ ದೂರದಲ್ಲಿರುವ ಸಿರಿಗೆರೆ ಗ್ರಾಮದ ಹತ್ತಿರದ ಗಾದ್ರಿಪಾಲನಾಯಕ ದೇವಸ್ಥಾನಕ್ಕೆ ತೆರಳಿ ಎಡೆ ಅರ್ಪಿಸಿ, ಪೂಜೆ ಸಲ್ಲಿಸಿ ಬರುವುದು ಈ ಯಾತ್ರೆಯ ವಿಶೇಷ.

## ಫಾಸ್ಟ್ ನ್ಯೂಸ್

### ಕರ್ನಾಟಕ ವಿದ್ಯಾ ಸಂಸ್ಥೆ ಸಭೆ: ಮಂಜುನಾಥ್ ಅಧ್ಯಕ್ಷ, ರಮೇಶ್ ಬಾಬು ಉಪಾಧ್ಯಕ್ಷರಾಗಿ ಆಯ್ಕೆ

» ಚಿತ್ರದುರ್ಗ



ಕರ್ನಾಟಕ ವಿದ್ಯಾ ಸಂಸ್ಥೆಯ 60 ನೇ ವಾರ್ಷಿಕ ಮಹಾ ಸಭೆಯಲ್ಲಿ ಮುಂದಿನ ಮೂರು ವರ್ಷಗಳಿಗೆ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ನಗರದ ಚಿನ್ಮೂಲಾದ್ರಿ ರಾಷ್ಟ್ರೀಯ ಪ್ರೌಢಶಾಲೆಯ ಕಚೇರಿಯಲ್ಲಿ ಶುಕ್ರವಾರ ಸರ್ವ ಸದಸ್ಯರ ಸಭೆ ನಡೆಯಿತು. ಈ ಸಂದರ್ಭದಲ್ಲಿ ಆಡಳಿತ ಮಂಡಳಿಯ ಎಲ್ಲಾ ಸದಸ್ಯರು ಹಾಜರಿದ್ದು ನೂತನ ಪದಾಧಿಕಾರಿಗಳನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು. ಅಧ್ಯಕ್ಷರಾಗಿ ಮಂಜುನಾಥ್.ವಿ. ಆರ್, ಉಪಾಧ್ಯಕ್ಷರಾಗಿ ರಮೇಶ್ ಬಾಬು, ಕಾರ್ಯದರ್ಶಿಯಾಗಿ ಎಂ. ಆರ್. ನಾರಾಯಣಪ್ಪನವರು, ಉಪ ಕಾರ್ಯದರ್ಶಿಯಾಗಿ ಡಿ.ಜಿ. ಪ್ರಭಾಕರ್ ರವರು, ಖಜಾಂಚಿ ಯಾಗಿ ಎಂ.ಹೆಚ್.ಆಂಜನೆಯ ರವರು ಸರ್ವಾನುಮತದಿಂದ ಆಯ್ಕೆಯಾಗಿದ್ದಾರೆ ಎಂದು ಆಡಳಿತ ಮಂಡಳಿಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಚಳ್ಳಕೆರೆಯಲ್ಲಿ ಸಂಭ್ರಮದ ವೈಕುಂಠ ಏಕಾದಶಿ



» ಚಳ್ಳಕೆರೆ

ನಗರದ ಹಳೇಟೌನ್‌ನ ಜಗಜೀವನರಾಮ್ ಕಾಲೋನಿಯಲ್ಲಿನ ತಿಪ್ಪಮ್ಮಸ್ವಾಮಿ ದೇವಸ್ಥಾನದಲ್ಲಿ ಪ್ರತಿವರ್ಷದಂತೆ ಈ ವರ್ಷವೂ ಭಕ್ತಿಶ್ರದ್ಧೆಯಿಂದ ವೈಕುಂಠ ಏಕಾದಶಿ ಕಾರ್ಯಕ್ರಮವನ್ನು ಆಚರಿಸಲಾಯಿತು. ಸುಪ್ರಭಾತದೊಂದಿಗೆ ಕಾರ್ಯಕ್ರಮ ಆರಂಭವಾಗಿದ್ದು, ನಂತರ ಏಳು ಪ್ರಮುಖ ದ್ವಾರಗಳಲ್ಲಿ ಭಕ್ತಾಧಿಗಳ ಪ್ರವೇಶಕ್ಕೆ ಅನುವು ಮಾಡಿಕೊಡಲಾಗಿತ್ತು. ದೇವಸ್ಥಾನಕ್ಕೆ ಆಗಮಿಸುವ ಭಕ್ತರಿಗೆ ಸ್ವಾಮಿಯ ದರ್ಶನದ ಜೊತೆಗೆ ಉಚಿತ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು. ಅಧ್ಯಕ್ಷ ಜಿ.ಮಾರಣ್ಣ, ಕಾರ್ಯದರ್ಶಿ ಟಿ.ಜಯಣ್ಣ, ಭದ್ರಿ, ತಿರುಮಲೇಶ್, ಲಕ್ಷಣ್, ಮಲ್ಲಿಕಾರ್ಜುನ್ ಮುಂತಾದವರು ಉಪಸ್ಥಿತರಿದ್ದರು. ಗಾಂಧಿನಗರದ ಪುರಾತನ ದೇವಸ್ಥಾನವಾದ ಶ್ರೀತಿಮ್ಮಪ್ಪಸ್ವಾಮಿ ಸನ್ನಿಧಿಯಲ್ಲೂ ವೈಕುಂಠ ಏಕಾದಶಿ ಕಾರ್ಯಕ್ರಮವನ್ನು ವಿಶೇಷ ಪೂಜೆ ಮತ್ತು ಅಲಂಕಾರಗಳಿಂದ ನಡೆಸಲಾಯಿತು. ದೇವಸ್ಥಾನದ ಆಡಳಿತ ಮಂಡಳಿ ನಿರ್ದೇಶಕ ತಿರುಮಲೇಶ್, ಚನ್ನಕೇಶವ ಮೂರ್ತಿ, ತಿಪ್ಪೇರುದ್ರಪ್ಪ, ಆರ್ಚಕರಾದ ಪ್ರದೀಪ್‌ಶರ್ಮ, ಪ್ರವೀಣ್‌ಶರ್ಮ, ಸವ್ಯಸಾಚಿ ಮುಂತಾದವರು ಉಪಸ್ಥಿತರಿದ್ದರು. ಈ ದೇವಸ್ಥಾನಗಳಿಗೆ ಸುತ್ತಮುತ್ತಲಿನ ಗ್ರಾಮಗಳ ಮತ್ತು ನಗರದ ನೂರಾರು ಭಕ್ತರು ಸರಥಿ ಸಾಲಿನಲ್ಲಿ ಆಗಮಿಸಿ ದೇವರ ದರ್ಶನ ಪಡೆದರು. ಬೆಳಗಿನಿಂದಲೇ ಪೂಜಾ ಕಾರ್ಯ ಆರಂಭವಾಗಿದ್ದು ಸಂಜೆಯ ತನಕ ಭಕ್ತರ ಆಗಮಿಸಿ ದೇವರ ದರ್ಶನ ಪಡೆದರು.

# ಇಂದು ಲಕ್ಷ್ಮಿನಾರಾಯಣ ಸ್ವಾಮಿ, ವೀರ ಪ್ರತಾಪ ಆಂಜನೇಯ ಸ್ವಾಮಿ ಮಹಾ ಬ್ರಹ್ಮರಥೋತ್ಸವ

## ಭಾರತಾಂಬೆಯ ಕನ್ನಡದ ಈ ಒಂದು ವಿಶೇಷವಾದ ರಥವನ್ನು ಎಳೆಯಲು 1 ಸಾವಿರ ಮಂದಿ ಬೇಕಾಗುತ್ತದೆ

» ನಾಗತಿಹಳ್ಳಿಮಂಜುನಾಥ್

**ಹೊಸದುರ್ಗ:** ತಾಲೂಕಿನ ಬೆಲಗೂರು ಕ್ಷೇತ್ರದ ಶ್ರೀ ವೀರಪ್ರತಾಪ ಆಂಜನೇಯ ಸ್ವಾಮಿ ಹಾಗೂ ಶ್ರೀ ಲಕ್ಷ್ಮೀನಾರಾಯಣ ಸ್ವಾಮಿ ದೇವರ ರಥೋತ್ಸವವು ಡಿ.24 ರಂದು ಭಾನುವಾರ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ನೆರವೇರಲಿದೆ. ಕ್ಷೇತ್ರದ ಶ್ರೀ ವೀರಪ್ರತಾಪ ಆಂಜನೇಯ ಸ್ವಾಮಿ ಹಾಗೂ ಶ್ರೀ ಲಕ್ಷ್ಮೀನಾರಾಯಣ ಸ್ವಾಮಿ ದೇವರ ರಥವನ್ನು 3.5 ಕೋಟಿ ರೂ ವೆಚ್ಚದಲ್ಲಿ ಕಳೆದ ಎರಡು ವರ್ಷಗಳ ಹಿಂದೆಯೆ ಸಿದ್ಧಗೊಂಡು ಲೋಕಾಪಣೆಯಾಗಿದೆ ರಥೋತ್ಸವವು ವೈಭವಯುತವಾಗಿ ಜರುಗಿತು.

ಡಿ.24 ರಂದು ಭಾನುವಾರವೂ ಸಹಾ ವಾರ್ಷಿಕ ಮಹಾ ಬ್ರಹ್ಮ ರಥೋತ್ಸವವು ಜರುಗಲಿದ್ದು ಭಾರತಾಂಬೆಯ ಕನ್ನಡದ ಈ ಒಂದು ವಿಶೇಷವಾದ ರಥವನ್ನು ಎಳ 'ಯಲು 1 ಸಾವಿರ ಮಂದಿ ಬೇಕಾಗುತ್ತದೆ.

ಬೆಲಗೂರಿನ ಮಾರುತಿ ಪೀಠದ ವಿಜಯ ಮಾರುತಿ ಶರ್ಮ ಸ್ವಾಮೀಜಿಯವರ ನೇತೃತ್ವದಲ್ಲಿ ನಡೆಯಲಿರುವ ಇಂತಹ ಅಪರೂಪದ ರಥೋತ್ಸವವನ್ನ ನೋಡಲು ನಾಡಿನ ಮೂಲೆಮೂಲೆಗಳಿಂದ ಸಹಸ್ರಾರು ಭಕ್ತರು ಆಗಮಿಸಿ ಭಾರತಾಂಬೆಯ ಕನ್ನಡದ ರಥೋತ್ಸವ ನೋಡಲು ಕಣ್ ತುಂಬಿಕೊಳ್ಳಲು ಭಕ್ತರ ಕ್ಷಣಗಣನೆಗೆ ಕಾಯುತಿದ್ದಾರೆ. ಸಾಮಾನ್ಯವಾಗಿ ರಥ , ತೇರುಗಳಲ್ಲಿ ದೇವಾನು ದೇವರುಗಳ ವಿಗ್ರಹ ಕೆತ್ತನೆ ಆಗಿರುತ್ತದೆ. ಆದರೆ ಚಿತ್ರದುರ್ಗ ಜಲ್ಲೆ ಹೊಸದುರ್ಗ ತಾಲ್ಲೂಕು ಶ್ರೀ ಕ್ಷೇತ್ರ ಬೆಲಗೂರು ಗ್ರಾಮದ ಶ್ರೀ ವೀರ ಪ್ರತಾಪ ಆಂಜನೇಯ ಸ್ವಾಮಿ ಸನ್ನಿದಿಯಲ್ಲಿ ನಿರ್ಮಾಣ ಗೊಂಡಿರುವ ರಥದಲ್ಲಿ ಸಾಹಿತಿಗಳ, ಕವಿಗಳ, ದೇಶಕ್ಕಾಗಿ ಪ್ರಾಣವನ್ನು ಅರ್ಪಣೆ ಮಾಡಿದ ಮಹಾನ್ ವ್ಯಕ್ತಿಗಳ ಮೂರ್ತಿಗಳನ್ನು ಕೆತ್ತಲಾಗಿದೆ.

**ರಥದ ವಿಶೇಷ:** ಸನಾತನ ಸಂಸ್ಕೃತಿಗೆ ತಮ್ಮ ಅಪಾರ ಕೊಡುಗೆಗನ್ನು ನೀಡಿದ ಋಷಿ ಪರಂಪರೆಯ ಬ್ರಹ್ಮರ್ಷಿಗಳಾದ ಕಾಶ್ಯಪ, ಅಗಸ್ತ್ಯ, ವಸಿಷ್ಠ, ವಿಶ್ವಾಮಿತ್ರ ಮುಂತಾದ ಸಪ್ತ ಋಷಿಗಳನ್ನು, ಬೃಹಸ್ಪತಿ ಶುಕ್ರಾಚಾರ್ಯ ವೇದವ್ಯಾಸರಂತಹ ದೇವರ್ಷಿಗಳನ್ನು, ಶುಕ, ಶುನಕ, ಕಪಿಲ, ಸಾಂಪಿನಿ ಮುಂತಾದ ಮಹರ್ಷಿಗಳ 48 ಉಬ್ಬು ಶಿಲ್ಪಗಳನ್ನು ಈ ರಥದಲ್ಲಿ ಕೆತ್ತಲಾಗಿದೆ. ಶ್ರೀ ಶಂಕರಾಚಾರ್ಯ, ಶ್ರೀ ಮಧ್ವಾಚಾರ್ಯ, ಶ್ರೀ ರಾಮಾನುಜಾಚಾರ್ಯ ಸೇರಿದಂತೆ 12 ಅವಧೂತರ ಉಬ್ಬುಶಿಲ್ಪಗಳನ್ನು, ಶ್ರೀ ರಾಮ ಕೃಷ್ಣ ಪರಮಹಂಸ, ಶ್ರೀ ವಿವೇಕಾನಂದರಂತಹ ಮಹರ್ಷಿಗಳನ್ನು, ಬಸವೇಶ್ವರರು, ಅಕ್ಕಮಹಾದೇವಿ, ಅಲ್ಲವ ಪ್ರಭು, ಮುಂತಾದ 12 ಶಿವಶರಣರನ್ನು, ಪುರಂದರದಾಸರು, ಕನಕದಾಸರು, ವಿಜಯವಿಠಲದಾಸರು ಮುಂತಾದ 12 ದಾಸ ಶ್ರೇಷ್ಠರನ್ನು, ಶ್ರೀ ಕೃಷ್ಣದೇವರಾಯ, ಛತ್ರಪತಿ ಶಿವಾಜಿಮಹಾರಾಜ, ಮದಕರಿನಾಯಕ ಮುಂತಾದ ಇತಿಹಾಸ ಪುರುಷರನ್ನು ಕೆತ್ತಲಾಗಿದೆ.



ಭಾರತಾಂಭೆಯ ದಾಸ್ಯಮುಕ್ತಗೊಳಿಸಲು ತಮ್ಮ ಪ್ರಾಣವನ್ನೆ ಸಮರ್ಪಿಸಿದಂತಹ ಸ್ವಾತಂತ್ರ್ಯ ಹೋರಾಟಗಾರರಾದ ಮಹಾತ್ಮಗಾಂಧೀಜಿ, ಲಾಲ್‌ಬಹದ್ದೂರ್ ಶಾಸ್ತ್ರೀಜಿ, ಸರ್ಧಾರ್ ವಲ್ಲಭಭಾಯ್ ಪಟೇಲ್, ಚಂದ್ರಶೇಖರ್‌ಆಜಾದ್, ಭಗತ್‌ಸಿಂಗ್, ಮಂಗಲಪಾಂಡೆ, ಸಾವರ್ಕರ್, ಝೂನ್ಸಿರಾಣಿ ಲಕ್ಷ್ಮೀಬಾಯಿ, ಕಿತ್ತೂರುರಾಣಿಚೆನ್ನಮ್ಮ, ಸಂಗೊಳ್ಳಿ ರಾಯಣ್ಣ ಮುಂತಾದ 40 ಕ್ಕೂ ಹೆಚ್ಚು ಕಲಾಕೃತಿಗಳನ್ನು ಕೆತ್ತನೆ ಮಾಡಲಾಗಿದೆ.

ಸ್ವತಂತ್ರಭಾರತದಮೊದಲಮಹಾದಂಡ ನಾಯಕ ಕನ್ನಡಿಗ ಜನರಲ್‌ಕಾರಿಯಪ್ಪ, ಎಂಜಿನಿಯರ್ ಸರ್.ಎಂ. ವಿಶ್ವೇಶ್ವರಯ್ಯ, ಶ್ರೇಷ್ಠ ಕವಿಗಳಾದ ಕವಿರತ್ನ ಕಾಳಿದಾಸ, ಪಂಪ, ರನ್ನ, ಜನ್ನ, ಲಕ್ಷ್ಮೀಶ, ಕುವೆಂಪು, ಜಿ. ಎಸ್. ಶಿವರುದ್ರಪ್ಪ, ದ.ರಾ ಬೇಂದ್ರೆ, ಎಸ್. ಎಲ್. ಭೈರಪ್ಪ ಮುಂತಾದ 30 ಕ್ಕೂ ಹೆಚ್ಚು ಕವಿಗಳನ್ನು, ಭಾರತದ ವಿಜ್ಞಾನಲೋಕವನ್ನು ಬೆಳಗಿದ ಭಾರದ್ವಾಜ ಮಹರ್ಷಿಗಳನ್ನು ಮೊದಲ್ಗೊಂಡು ಜಗದೀಶ್‌ಚಂದ್ರಭೋಸ್, ಹೋಮಿಜಹಾಂಗೀರ್‌ಬಾಬಾ, ಸಿ.ವಿ. ರಾಮನ್, ಅಬ್ದುಲ್ ಕಲಾಂ ತನಕ 28 ವಿಜ್ಞಾನಿಗಳನ್ನು, ದಕ್ಷಿಣಭಾರತದ ಸಂಗೀತ ಪರಂಪರೆಯ ಮೇರು ಪ್ರತಿಭೆಗಳಾದ ತ್ಯಾಗರಾಜರು, ಮುತ್ತುಸ್ವಾಮಿ ದೀಕ್ಷಿತರು, ಶಾಮಾಶಾಸ್ತ್ರಿಗಳು ಮುಂತಾದ ಸಂಗೀತ ದಿಗ್ಗಜರನ್ನು, ಭಾರತೀಯ ಚಿತ್ರರಂಗದ ಅಪ್ರತಿಮ ಕಲಾವಿದರಾದ ಡಾ.ರಾಜ್‌ಕುಮಾರ್, ಡಾ. ವಿಷ್ಣುವರ್ಧನ್, ಎನ್. ಟಿ. ರಾಮರಾವ್, ಘಂಟಸಾಲ, ನರಸಿಂಹರಾಜು ಮುಂತಾದಕಲಾವಿದರನ್ನು, ಈ ರಥದಲ್ಲಿ ಉಬ್ಬುಶಿಲ್ಪಗಳ ಮೂಲಕ ಕೆತ್ತಿ ಅವರಿಗೆ ಕೃತಜ್ಞತೆ ಮತ್ತು ಗೌರವ ಸಲ್ಲಿಸಲಾಗಿದೆ. ರಾಜ್ಯದಲ್ಲಿಯೇ ಗಮನ ಸೆಳೆಯುವಂತೆ ರಥವನ್ನುಅತ್ಯಂತ ವಿಶೇಷವಾಗಿ ನಿರ್ಮಿಸಲಾಗಿದೆ. ದೇಶಕ್ಕಾಗಿ ದುಡಿದವರ ಮಹಾನ್ ವ್ಯಕ್ತಿಗಳು, ಸಾಹಿತಿಗಳು, ಕವಿಗಳು, ದಾರ್ಶನಿಕರನ್ನು ಒಳಗೊಂಡಿರುವ ತೇರು ಆಕರ್ಷಕವಾಗಿದೆ. ಭಾರತಾಂಬೆಯ ರಥವನ್ನ ಶ್ರೀ ಬಿಂಧುಮಾಧವ ಶರ್ಮಾ ಸ್ವಾಮೀಜಿ ಮಾರ್ಗದರ್ಶನೆ ಕೆತ್ತನೆ ಮಾಡಲಾಗಿತ್ತು.

### ಹನುಮ ಜಯಂತಿಯ ಅಂಗವಾಗಿ ಬೆಲಗೂರಿನಲ್ಲಿ ನಡೆದ ವೈವಿಧ್ಯಮಯ ಪೂಜಾ ಕೈಂಕರ್ಯಗಳು

**ಹೊಸದುರ್ಗ:** ಹನುಮ ಜಯಂತಿಯ ಅಂಗವಾಗಿ ತಾಲೂಕಿನ ಬೆಲಗೂರು ಕ್ಷೇತ್ರದ ಶ್ರೀ ಲಕ್ಷ್ಮೀನಾರಾಯಣ ಸ್ವಾಮೀ ಸನ್ನಧಿಯಲ್ಲಿ ಬೆಲಗೂರಿನ ಮಾರುತಿ ಪೀಠದ ವಿಜಯ ಮಾರುತಿ ಶರ್ಮ ಸ್ವಾಮೀಜಿಯವರ ನೇತೃತ್ವದಲ್ಲಿ ಶನಿವಾರ ಸಂಜೆ ಅಲಂಕಾರ,ರಜತ ಕವಚಧಾರಣಾ,ಶ್ರೀ ಮಹಾಗಣಪತಿ ಪ್ರಜಾ,ಸ್ವಷ್ತಿ ಚಾಚನ, ದೇವನಾಂದೀ, ಭೇರತಾಡನ ದೇವತಾ ವಾಹನ, ರಕ್ಷಾಬಂಧನ,ಗ 'ರುಡಾದ್ವಜಾರೋಹಣ,ಕಲಶಸ್ಥಾಪನಾ,ಅಂಕುರಾರ್ಪಣೆ,ನಿತ್ಯ ಹೋಮ ಹಾಗೂ ಗರುಡೋತ್ಸವ ಕಾರ್ಯಕ್ರಮಗಳು ದೀಪಾರಾಧನೆ,ನಿತ್ಯಹೋಮ, ಬಲಿಪ್ರದಾನ ಶೇಷವಾಹನೋತ್ಸವ ಕಾರ್ಯಕ್ರಮಗಳು ನೆರವೇರಿದವು ಅದೇ ರೀತಿ ಶ್ರೀ ವೀರಪ್ರತಾಪ ಆಂಜನೇಯ ಸ್ವಾಮಿ ಸನ್ನಿಧಿಯಲ್ಲಿ ಯಥಾ ರೀತಿಯಾದ ಪೂಜಾ ಕೈಂಕರ್ಯಗಳು ಜರುಗಿದವು.

### ಹನುಮ ಜಯಂತಿಯ ಅಂಗವಾಗಿ ಬೆಲಗೂರಿನಲ್ಲಿ ಪೂಜಾ ಕೈಂಕರ್ಯಗಳು



» ಹೊಸದುರ್ಗ

ಹನುಮ ಜಯಂತಿಯ ಅಂಗವಾಗಿ ತಾಲೂಕಿನ ಬೆಲಗೂರು ಕ್ಷೇತ್ರದ ಶ್ರೀ ಲಕ್ಷ್ಮೀನಾರಾಯಣ ಸ್ವಾಮೀ ಸನ್ನಧಿಯಲ್ಲಿ ಬೆಲಗೂರಿನ ಮಾರುತಿ ಪೀಠದ ವಿಜಯ ಮಾರುತಿ ಶರ್ಮ ಸ್ವಾಮೀಜಿಯವರ ನೇತೃತ್ವದಲ್ಲಿ ಶನಿವಾರ ಸಂಜೆ ಅಲಂಕಾರ,ರಜತ ಕವಚಧಾರಣಾ,ಶ್ರೀ ಮಹಾಗಣಪತಿ ಪ್ರಜಾ,ಸ್ವಷ್ತಿ ಚಾಚನ, ದೇವನಾಂದೀ, ಭೇರತಾಡನ ದೇವತಾ ವಾಹನ, ರಕ್ಷಾಬಂಧನ,ಗ 'ರುಡಾದ್ವಜಾರೋಹಣ,ಕಲಶಸ್ಥಾಪನಾ,ಅಂಕುರಾರ್ಪಣೆ,ನಿತ್ಯ ಹೋಮ ಹಾಗೂ ಗರುಡೋತ್ಸವ ಕಾರ್ಯಕ್ರಮಗಳು ದೀಪಾರಾಧನೆ,ನಿತ್ಯಹೋಮ, ಬಲಿಪ್ರದಾನ ಶೇಷವಾಹನೋತ್ಸವ ಕಾರ್ಯಕ್ರಮಗಳು ನೆರವೇರಿದವು ಅದೇ ರೀತಿ ಶ್ರೀ ವೀರಪ್ರತಾಪ ಆಂಜನೇಯ ಸ್ವಾಮಿ ಸನ್ನಿಧಿಯಲ್ಲಿ ಯಥಾ ರೀತಿಯಾದ ಪೂಜಾ ಕೈಂಕರ್ಯಗಳು ಜರುಗಿದವು.

## ಹೊರಗುತ್ತಿಗೆ ನೌಕರ ನೇಮಕಾತಿಯಲ್ಲಿ ಮೀಸಲಾತಿ

**ಬೆಂಗಳೂರು:** ರಾಜ್ಯದಲ್ಲಿ ಹೊರಗುತ್ತಿಗೆ ನೌಕರಿಯಲ್ಲಿ ಮೀಸಲಾತಿ ಇರಲಿಲ್ಲ, ಆದರೆ ಈಗ ಬದಲಾವಣೆಗೆ ಸರ್ಕಾರ ಮುಂದಾಗಿದೆ. ಕಾಲೇಜು ಶಿಕ್ಷಣ ಇಲಾಖೆ ಹಾಗೂ ಸರಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಅವಶ್ಯಕವಿರುವ 449 ಹುದ್ದೆಗಳ ಸೇವೆಯನ್ನು ಹೊರಗುತ್ತಿಗೆ ಆಧಾರದಲ್ಲಿ ಪಡೆಯಲು ಆಡಳಿತಾತ್ಮಕ ಅನುಮೋದನೆ ನೀಡಿರುವ ರಾಜ್ಯ ಸಚಿವ ಸಂಪುಟ ಸಭೆಯು, ಈ ನೇಮಕಾತಿಯಲ್ಲಿ ಸಾಮಾಜಿಕ ನ್ಯಾಯ ಪಾಲನೆ ಮಾಡಲು ಇದೇ ಮೊದಲ ಬಾರಿಗೆ ಹೊರುಗುತ್ತಿಗೆ ನೇಮಕಾತಿಯಲ್ಲೂ ಮೀಸಲಾತಿ ಪದ್ಧತಿ ಅಳವಡಿಸಿಕೊಳ್ಳಲು ತೀರ್ಮಾನಿಸಿದೆ.

ಗುರುವಾರ ವಿಧಾನಸೌಧದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ್ ಈ ವಿಷಯವನ್ನು ಮಾಹಿತಿ ನೀಡಿದ್ದಾರೆ.

ಕಾಲೇಜು ಶಿಕ್ಷಣ ಇಲಾಖೆ ಹಾಗೂ 430 ಸರಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಅವಶ್ಯಕವಿರುವ 347 ಗ್ರೂಪ್-ಡಿ ನೌಕರರು ಮತ್ತು 102 ಡಾಟಾ ಎಂಟ್ರಿ ಆಪರೇಟರ್ ಗಳು ಸೇರಿದಂತೆ, ಒಟ್ಟು 449 ಹುದ್ದೆಗಳ ಸೇವೆಯನ್ನು ಅಂದಾಜು 11.30 ಕೋಟಿ ರೂ.ಗಳ ಮೊತ್ತದಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಪಡೆಯಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಜೊತೆಗೆ, ಈ ನೇಮಕಾತಿಯಲ್ಲಿ ಸಾಮಾಜಿಕ ನ್ಯಾಯ ಪಾಲನೆ ಮಾಡಲು ರಾಜ್ಯದ ಮೀಸಲಾತಿ ಪದ್ಧತಿಯನ್ನು ಅಳವಡಿಸಿಕೊಳ್ಳಲು ಸಚಿವ ಸಂಪುಟ ನಿರ್ಧರಿಸಿದೆ ಎಂದು ಅವರು ಹೇಳಿದರು..





## ಪ್ರಮುಖ ಸುದ್ದಿ

### ಗಾಯಿತ್ರಿ ಕಲ್ಯಾಣ ಮಂಟಪದಲ್ಲಿ ಅಯ್ಯಪ್ಪಸ್ವಾಮಿ ದರ್ಶನಕ್ಕೆ ಅವಕಾಶ

# ಮೊದಲನೇ ದಿನ ಕಾರ್ಯಕ್ರಮ ಯಶಸ್ವಿ

» ಚಳ್ಳಕೆರೆ

ನಗರದ ಗಾಯಿತ್ರಿ ಕಲ್ಯಾಣ ಮಂಟಪ ಆವರಣದಲ್ಲಿ ಇದೇ ಮೊದಲ ಬಾರಿಗೆ ನಿರ್ಮಿಸಿದ ಶ್ರೀಶಬರಿಮಲೆ ಅಯ್ಯಪ್ಪಸ್ವಾಮಿ ಸನ್ನಿಧಾನದಲ್ಲಿ ಪೂಜಾ ಕಾರ್ಯಕ್ರಮಗಳು ಆರಂಭವಾಗಿದ್ದು, ನಗರದ ಸಾವಿರಾರು ಅಯ್ಯಪ್ಪಸ್ವಾಮಿ ಭಕ್ತರು ಪೂಜೆಯಲ್ಲಿ ಪಾಲ್ಗೊಂಡಿದ್ದರು.



ವಿಶೇಷವೆಂದರೆ ಮಹಿಳೆಯರೂ ಸೇರಿದಂತೆ ವೃದ್ಧರು ಹಾಗೂ ಮಕ್ಕಳು ಶಬರಿಮಲೆಗೆ ಹೋಗಿ ಶ್ರೀಅಯ್ಯಪ್ಪಸ್ವಾಮಿ ದರ್ಶನ ಪಡೆಯಲು ಸಾಧ್ಯವಾಗದ ಉದಾಹರಣೆಗಳಿದ್ದು ಇಂತಹ ಭಕ್ತರಿಗೆ ಶ್ರೀಸ್ವಾಮಿಯ ದರ್ಶನವನ್ನು ಇಲ್ಲಿಯೇ ಮಾಡಿಸಲು ಶ್ರೀಸ್ವಾಮಿಯ ಪರಮಭಕ್ತರಾದ ಖಾಸಗಿ ಬಸ್ ಏಜೆಂಟ್ ಗುರುಜಗ್ಗುಸ್ವಾಮಿ, ಬಾಸ್ ರೇಣುಕಾಸ್ವಾಮಿ ಶಿಷ್ಯವೃಂದ ಹರಿಹರಸುತ ಸೇವಾ ಸಮಿತಿ ಆಶ್ರಯದಲ್ಲಿ ಈ ಕಾರ್ಯಕ್ರಮವನ್ನು ಆಯೋಜಿಸಿದ್ದು, ನಗರದ ನೂರಾರು ಜನರು ಆಗಮಿಸಿ ಭಕ್ತಿಯಿಂದ ಶ್ರೀಸ್ವಾಮಿಯ ದರ್ಶನ ಪಡೆದರು.

ಶ್ರೀ ಅಯ್ಯಪ್ಪಸ್ವಾಮಿ ದಿವ್ಯಮಂಟಪದ ಮುಂಭಾಗದಲ್ಲಿಯೇ ಶ್ರೀಗಣಹೋಮದೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಶ್ರೀಅಯ್ಯಪ್ಪಸ್ವಾಮಿ ವಿಗ್ರಹವನ್ನು ನೂತನವಾಗಿ ನಿರ್ಮಿಸಿದ ಸೆಟ್‌ನಲ್ಲಿ ಪ್ರತಿಷ್ಠಾಪಿಸಿ ಉಷಾಪೂಜೆ, ತುಪ್ಪಾಭಿಷೇಕ, ಅಷ್ಟಾಭಿಷೇಕ, ಉದಯಅಸ್ತಮಾನ ಪೂಜೆ, ಗೋಪೂಜೆ, ಉಚ್ಚಪೂಜೆ, ಪಡಿಪ್ರತಿಷ್ಠಾಪನಾ ಪೂಜೆ, ಪಟ್ಟಾಭಿಷೇಕ, ಮಹಾಮಂಗಳಾರತಿ ಮತ್ತು ಪ್ರಸಾದ ವಿನಿಯೋಗ ಕಾರ್ಯಕ್ರಮ ನಡೆಸಲಾಯಿತು.

ಶಬರಿಮಲೆಯ ಮಣಿಮಂಟಪದ ಆರ್ಚಕರಾದ ಅಜಿತ್‌ಜನಾರ್ಧನಕುರೂಫ್, ಶಿಲ್ಪಿ ಸ್ತಪತಿ ಎನ್.ದೊರೆಬಾಬು, ಶಬರಿಮಲೆಯ ಆರ್ಚಕ ಆನಂದನಂಬೂಧರಿ ಇವರ ಮಾರ್ಗದರ್ಶನದಲ್ಲಿ ಪೂಜಾ ಕಾರ್ಯಕ್ರಮಗಳನ್ನು ನಡೆಸಲಾಯಿತು. ಡಿ.25ರ ಸೋಮವಾರದ ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಿ.ಸುಧಾಕರ, ಕ್ಷೇತ್ರದ ಶಾಸಕ ಟಿ.ರಘುಮೂರ್ತಿ, ಚಿತ್ರದುರ್ಗ ಶಾಸಕ ಕೆ.ಸಿ.ವೀರೇಂದ್ರಪಪ್ಪಿ, ಶಬರಿಮಲೆ ಅಯ್ಯಪ್ಪಸ್ವಾಮಿ ಸೇವಾ ಸಮಾಜದ ರಾಷ್ಟ್ರೀಯ ಅಧ್ಯಕ್ಷ ಟಿ.ಬಿ.ಶೇಖರ್, ರಾಜ್ಯಾಧ್ಯಕ್ಷ ಜಯರಾಮ್ ಮುಂತಾದವರು ಭಾಗವಹಿಸುವರು ಎಂದು ವ್ಯವಸ್ಥಾಪಕರ ಪರವಾಗಿ ಕೀರ್ತಿಪ್ರಸಾದ್ ತಿಳಿಸಿದ್ದಾರೆ.

## ಫಾಸ್ಟ್ ನ್ಯೂಸ್

### ಡಾಗ್ ಸರ್ಕಲ್ ನಲ್ಲಿ ನೀರು ಬಂದಿದೆ! ದಾರಿಯಾವಾಗ ಬರುತ್ತದೆ?



» **ಹಿರಿಯೂರು**

ವೇದಾವತಿ ನಗರದ 3 ನೇ ವಾರ್ಡ್ ಚಂದ್ರಾ ಲೇ ಔಟ್ "ಡಾಗ್ ಸರ್ಕಲ್" ನಲ್ಲಿ ಮಂಗಳವಾರ ಬೆಳಿಗ್ಗೆ ಸಮೃದ್ಧವಾಗಿ ವಾಣಿವಿಲಾಸ ಸಾಗರ ಜಲಾಶಯದ ಶುದ್ಧ ಕುಡಿಯುವ ನೀರು ಬಂದು ಯುಗಾದಿ ಸಂಭ್ರಮ ಮನೆ ಮಾಡಿದೆ ಎಂಬುದಾಗಿ ನಾಗರೀಕ ಹಿತರಕ್ಷಣಾ ಸಮಿತಿ ಗೌರವಾಧ್ಯಕ್ಷ ಎಸ್.ವಿ.ರಂಗನಾಥ್ ತಿಳಿಸಿದ್ದಾರೆ.ದೀಪದ ಕೆಳಗೆ ಕತ್ತಲೆ ಎಂಬಂತೆ ಕೂಗಳತೆ ದೂರದಲ್ಲಿ ಓವರ್ ಹೆಡ್ ಟ್ಯಾಂಕ್ ಇದ್ದಾಗ್ಯೂ ಕಳೆದ 3 ತಿಂಗಳಿಂದ ಸಮರ್ಪಕ ಕುಡಿಯುವ ನೀರು ಬಂದಿರಲಿಲ್ಲ. ನಾಗರೀಕ ಹಿತರಕ್ಷಣಾ ಸಮಿತಿ ಸದಸ್ಯರ ನಿರಂತರ ಬೇಡಿಕೆಗೆ ನಗರಸಭೆ ಅಧಿಕಾರಿಗಳು ಸ್ಪಂದಿಸಿ ನೀರು ಪೂರೈಕೆ ಮಾಡಿದ್ದಕ್ಕೆ ಈ ಮೂಲಕ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ. ಬಹುದಿನಗಳಿಂದ ನೆನೆಗುದಿಗೆ ಬಿದ್ದಿರುವ ಚಂದ್ರಾ ಲೇ ಔಟ್ ರಸ್ತೆ ಕಾಮಗಾರಿ ತ್ವರಿತಗತಿಯಲ್ಲಿ ಮಾಡಿಸಿ ನಾಗರೀಕರಿಗೆ ಓಡಾಡಲು ಅನುಕೂಲ ಮಾಡಿಕೊಡಬೇಕು, ನಗರಸಭೆ ದಾಖಲೆ ಪ್ರಕಾರ ಪಾರ್ಕ್ ಜಾಗ ಅಳತೆ ಮಾಡಿಸಿ ಸಸಿ ನೆಡುವ ಮೂಲಕ ಉದ್ಯಾನವನ ಜಾಗ ಉಳಿಸಿ ಕೊಡಬೇಕು ಎಂದರಲ್ಲದೆ, ನಗರಸಭೆಗೆ ಸಕಾಲದಲ್ಲಿ ಆಸ್ತಿ ತೆರಿಗೆ,ನೀರಿನ ಕಂದಾಯ ಪಾವತಿಸಿದ್ದಾಗ್ಯೂ ನಗರಸಭೆ ಲೆಡ್ಜರ್ ಗಳಲ್ಲಿ ಕಂದಾಯ ಬಾಕಿ ತೋರಿಸುತ್ತಿದೆ, ಅಕಸ್ಮಾತ್ ರಸೀದಿ ಕಳೆದುಕೊಂಡರೆ ನಮ್ಮ ಮಕ್ಕಳು ಮೊಮ್ಮಕ್ಕಳು ಮತ್ತೊಮ್ಮೆ ದಂಡ ಸಹಿತ ಬಾಕಿ ಕಂದಾಯ ಕಟ್ಟಬೇಕಾಗುತ್ತದೆ, ಪ್ರಯುಕ್ತ ಸಂಬಂಧಿಸಿದ ನೌಕರರು ಇಂತಹ ತಪ್ಪು ನಡೆಯದಂತೆ ಮುಂಜಾಗ್ರತೆ ವಹಿಸಬೇಕೆಂದು ಮನವಿ ಮಾಡಿದ್ದಾರೆ.

# ನೆಹರುಮಾರುಕಟ್ಟೆ ವ್ಯಾಪಾರಿಗಳ ಸ್ಥಳಾಂತರಿಸಿ

## ಬೀದಿಬದಿ ವ್ಯಾಪಾರಿಗಳಿಗೆ ತೊಂದರೆಯಾಗದಂತೆ ಕ್ರಮ ಕೈಗೊಳ್ಳುವುದಾಗಿ ಭರವಸೆನೀಡಿದ ಸಚಿವ ಡಿ.ಸುಧಾಕರ್

» **ಹಿರಿಯೂರು**

ನಗರದ ನೆಹರು ಮಾರುಕಟ್ಟೆ ವ್ಯಾಪಾರಿಗಳ ಮನವಿಯ ಮೇರೆಗೆ ಜಿಲ್ಲಾ ಉಸ್ತುವಾರಿ ಸಚಿವ ಡಿ ಸುಧಾಕರ್ ಭಾನುವಾರ ಬೆಳಿಗ್ಗೆ ಮಾರುಕಟ್ಟೆಗೆ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿದರು.

ನಗರಸಭೆಯವರು ಕಳೆದ ಎರಡು ದಿನಗಳ ಹಿಂದೆ ಟ್ರಾಫಿಕ್ ಸಮಸ್ಯೆಯ ಕಾರಣದಿಂದ ಮಾರ್ಕೆಟ್ ಮುಂದಿನ ಬಸ್ ನಿಲ್ದಾಣದ ವ್ಯಾಪಾರಿಗಳನ್ನು ಸಂತೆ ಮೈದಾನಕ್ಕೆ ಸ್ಥಳಾಂತರ ಮಾಡುವ ಕಾರ್ಯಾಚರಣೆ ಕೈಗೊಂಡ ಪರಿಣಾಮ ತರಕಾರಿ ವ್ಯಾಪಾರಿಗಳ ತಂಡ ಸಚಿವರ ಮೊರೆ ಹೋಗಿತ್ತು.

ಈ ವೇಳೆ ವ್ಯಾಪಾರಿಗಳು ಇಲ್ಲಿಂದ ಸಂತೆ ಮೈದಾನಕ್ಕೆ ಸ್ಥಳಾಂತರ ಮಾಡಿದರೆ ಸಂಪೂರ್ಣ ವ್ಯಾಪಾರವೇ ಇಲ್ಲದಂತಾಗುತ್ತದೆ, ಮುಖ್ಯರಸ್ತೆಯಿಂದ ದೂರವಿದ್ದರೆ ವ್ಯಾಪಾರ ಆಗುವುದಿಲ್ಲ, ಇಲ್ಲಿಯೇ ಮಾರ್ಕೆಟ್ ಹಿಂಬದಿ ರಸ್ತೆಯಲ್ಲಿ ಒಂದು ಮಗ್ಗುಲಲ್ಲಿ ಕುಳಿತು ವ್ಯಾಪಾರ ಮಾಡಲು ಅವಕಾಶ ಮಾಡಿಕೊಡಿ ಎಂಬುದಾಗಿ ವ್ಯಾಪಾರಿಗಳು ಸಚಿವರಿಗೆ ಮನವಿ ಮಾಡಿದರು.



ವ್ಯಾಪಾರಿಗಳ ಬೇಡಿಕೆಗೆ ಉತ್ತರಿಸಿದ ಸಚಿವರು, ಈ ಭಾಗದಲ್ಲಿನ ಟ್ರಾಫಿಕ್ ಸಮಸ್ಯೆಗೆ ಇತಿಶ್ರೀ ಹಾಡಲೇಬೇಕಿದೆ, ಹಾಗಂತ ಇಲ್ಲಿನ ವ್ಯಾಪಾರಿಗಳ ದುಡಿಮೆಗೆ ತೊಂದರೆಯಾಗುವಂತಹ ನಿರ್ಧಾರ ಮಾಡುವುದಿಲ್ಲ, ಒಂದೆರಡು ದಿನದಲ್ಲಿ ಟ್ರಾಫಿಕ್ ಆಗದಂತೆ ವ್ಯಾಪಾರಕ್ಕೂ ತೊಂದರೆಯಾಗದಂತೆ ವ್ಯವಸ್ಥೆ ಮಾಡಲಾಗುವುದು ಎಂಬುದಾಗಿ ಭರವಸೆ ನೀಡಿದರು. ನಗರಸಭೆ ಪೌರಾಯುಕ್ತರಾದ ಹೆಚ್.ಮಹಾಂತೇಶ್ ಮಾತನಾಡಿ, ಬಸ್ ಅಪಘಾತದ ನಂತರ ಈ ಭಾಗದಲ್ಲಿ ಎಲ್ಲೆಂದರಲ್ಲಿ ವ್ಯಾಪಾರ ಮಾಡುವುದು ಹೂವಿನ ಮಾರ್ಕೆಟ್ ಗೆ ಬರುವವರು ಉಂಟು ಮಾಡುತ್ತಿದ್ದ ಟ್ರಾಫಿಕ್ ಗೆ ಕಡಿವಾಣ ಹಾಕಲು ನಗರಸಭೆ ವತಿಯಿಂದ ಕ್ರಮ ತೆಗೆದುಕೊಂಡಿದ್ದೇವೆ, ಮಾರ್ಕೆಟ್ ನೊಳಗೆ ಕುಳಿತು ವ್ಯಾಪಾರ ಮಾಡಲು ಮೂಲಭೂತ ಸೌಕರ್ಯ ಕೊಡುತ್ತಿದ್ದೇವೆ ಎಂದರಲ್ಲದೆ,

ಇಲ್ಲಿನ ವ್ಯಾಪಾರಿಗಳ ಉಪಯೋಗಕ್ಕೆ ಎಂದು ನಿರ್ಮಿಸಿರುವ ಶೌಚಾಲಯವನ್ನು ಸುಸಜ್ಜಿತಗೊಳಿಸಲಾಗಿದೆ, ಮಾರ್ಕೆಟ್ ನ ಒಳಗೆ ಬೆಳಕಿನ ವ್ಯವಸ್ಥೆ ಮಾಡಿಕೊಟ್ಟಿದ್ದೇವೆ, ಇದೀಗ ಸಚಿವರ ಬಳಿ ಅವರ ಅಹವಾಲು ಸಲ್ಲಿಸಿದ್ದಾರೆ, ಒಟ್ಟಿನಲ್ಲಿ ಸಾರ್ವಜನಿಕರಿಗೆ, ಪ್ರಯಾಣಿಕರಿಗೆ ತೊಂದರೆ ಆಗದ ರೀತಿ ಕ್ರಮ ಕೈಗೊಳ್ಳಲಾಗುವುದು ಎಂದರು.

ಈ ಸಂದರ್ಭದಲ್ಲಿ ನಗರಸಭೆ ಸದಸ್ಯ ಅಜಯ್ ಕುಮಾರ್, ಆರೋಗ್ಯ ನಿರೀಕ್ಷಕಿ ಸಂಧ್ಯಾ, ನಾಗಲಕ್ಷ್ಮಿ, ಬಾಬು ಇತರರು ಹಾಜರಿದ್ದರು.


# ಕೊರೊನಾ ಮಾರ್ಗಸೂಚಿ ರೂಪಿಸಿಲ್ಲ

## ಪೋಷಕರು ಆತಂಕಪಡುವ ಅವಶ್ಯಕತೆ ಇಲ್ಲ ಆದರೆ ಎಚ್ಚರ ವಹಿಸಿ: ಮಧುಬಂಗಾರಪ್ಪ

» **ಹಿರಿಯೂರು**

ರಾಜ್ಯದಲ್ಲಿ ಕೋವಿಡ್ ಸೋಂಕಿನ ಪ್ರಕರಣಗಳು ಹೆಚ್ಚಾಗುತ್ತಿದ್ದಂತೆಯೇ, ಕೊರೊನಾ ಸೋಂಕಿನ ಅಗತ್ಯ ಸುರಕ್ಷತಾ ಕ್ರಮಗಳನ್ನು ಅನುಸರಿಸಬೇಕು ಎಂಬುದಾಗಿ ಕರ್ನಾಟಕ ರಾಜ್ಯ ಖಾಸಗಿ ಶಾಲಾ ಆಡಳಿತ ಮಂಡಳಿಗಳ ಒಕ್ಕೂಟವು ಖಾಸಗಿ ಶಾಲೆಗಳಿಗೆ ಸೂಚನೆಯನ್ನು ನೀಡಿದೆ.

ವಿದ್ಯಾರ್ಥಿಗಳನ್ನು ರಜಾದಿನಗಳಲ್ಲಿ ಹೆಚ್ಚಿನ ಜನಸಂದಣಿ ಇರುವ ಸ್ಥಳ ಅಥವಾ ಜನರ ಜನಜಂಗುಳಿ ಜಾಗಕ್ಕೆ ಕರೆದುಕೊಂಡು ಹೋಗಬಾರದು ಮಕ್ಕಳಿಗೆ ನಿತ್ಯವೂ ದೇಹದ ಉಷ್ಣಾಂಶ ಪರೀಕ್ಷಿಸಬೇಕು. ಶಾಲೆಯಲ್ಲಿ ಮಕ್ಕಳ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಬೇಕು.ಪಾಲಕರು ಸಹ ಮಕ್ಕಳ ಬಗ್ಗೆ ನಿಗಾ ವಹಿಸಬೇಕು, ನಿಯಮಿತವಾಗಿ ಶಾಲಾ ಆವರಣವನ್ನು ಸ್ಯಾನಿಟೈಸ್ ಮಾಡಬೇಕು ಎಂಬುದಾಗಿ ಸೂಚನೆ ನೀಡಿದೆ.



ಶಿಕ್ಷಣ ಇಲಾಖೆ ಅಧಿಕೃತವಾಗಿ ಶಾಲೆಗಳಿಗೆ ಇನ್ನೂ ಯಾವುದೇ ಅಗತ್ಯಕ್ರಮಗಳನ್ನು ಅನುಸರಿಸುವಂತೆ ಮಾರ್ಗಸೂಚಿ ಬಿಡುಗಡೆ ಮಾಡಿಲ್ಲ. ಆದರೂ ಖಾಸಗಿ ಶಾಲಾ ಆಡಳಿತ ಮಂಡಳಿಗಳ ಒಕ್ಕೂಟವು ಖಾಸಗಿ ಶಾಲೆಗಳು ಮಕ್ಕಳ ಸುರಕ್ಷತೆ ದೃಷ್ಟಿಯಿಂದ ಕೆಲ ಮಾರ್ಗಸೂಚಿಗಳನ್ನು ಅನುಸರಿಸುವಂತೆ ಸೂಚಿಸಿದೆ.ಈ ಕುರಿತು ಪ್ರತಿಕ್ರಿಯಿಸಿರುವ ಶಿಕ್ಷಣ ಸಚಿವರಾದ ಮಧು ಬಂಗಾರಪ್ಪರವರು ಸದ್ಯಕ್ಕೆ ನಮ್ಮ ಇಲಾಖೆ ಶಾಲೆಗಳಿಗೆ ಯಾವುದೇ ಪ್ರತ್ಯೇಕ ಮಾರ್ಗಸೂಚಿ ರೂಪಿಸಿಲ್ಲ, ಹೀಗಾಗಿ ಶಾಲಾ ಆಡಳಿತ ಮಂಡಳಿ ಅಥವಾ ಪೋಷಕರು ಹೆಚ್ಚಿನ ಆತಂಕ ಪಡುವ ಅವಶ್ಯಕತೆ ಇಲ್ಲ, ಆದರೆ ಎಚ್ಚರ ವಹಿಸಬೇಕು ಎಂಬುದಾಗಿ ತಿಳಿಸಿದ್ದಾರೆ.

# ಹಿರಿಯೂರಿನಿಂದ ಚಿತ್ರದುರ್ಗಕ್ಕೆ ಬೆಳಗ್ಗೆ ಹಾಗೂ ಸಂಜೆ ನಿಗದಿತಸಮಯಕ್ಕೆ ಬಸ್ ಕಲ್ಪಿಸುವಂತೆ ಜನರ ಒತ್ತಾಯ



» **ಹಿರಿಯೂರು**

ಹಿರಿಯೂರಿನಿಂದ ಚಿತ್ರದುರ್ಗಕ್ಕೆ ಬೆಳಗ್ಗೆ ಹಾಗೂ ಸಂಜೆ ವೇಳೆಯಲ್ಲಿ ನಿಗದಿತ ಸಮಯಕ್ಕೆ ಸಮರ್ಪಕ ಬಸ್ ಸೌಕರ್ಯ ಇಲ್ಲದೆ ಶಾಲೆ ಕಾಲೇಜಿನ ವಿದ್ಯಾರ್ಥಿಗಳು, ವಿವಿಧ ಕಚೇರಿಗಳಿಗೆ ತೆರಳುವ ನೌಕರರು, ಪ್ರಯಾಣಿಕರು ಪರದಾಡುವಂತಹ ಸ್ಥಿತಿ ಉಂಟಾಗಿದೆ ಎಂಬುದಾಗಿ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.ತಾಲ್ಲೂಕಿನಿಂದ ಜಿಲ್ಲಾ ಕೇಂದ್ರ ಚಿತ್ರದುರ್ಗಕ್ಕೆ ಪ್ರತಿನಿತ್ಯ ನೂರಾರು ವಿದ್ಯಾರ್ಥಿಗಳು, ವಿವಿಧ ಕಚೇರಿಗಳಿಗೆ ತೆರಳುವ ನೌಕರರು, ಪ್ರಯಾಣಿಕರು ಸೇರಿದಂತೆ ಸಾವಿರಾರು ಸಂಖ್ಯೆಯಲ್ಲಿ ನಾಗರೀಕರು ಸಂಚರಿಸುತ್ತಾರೆ. ಈ ಮಾರ್ಗದಲ್ಲಿ ಯಾವುದೇ ಖಾಸಗಿ ಬಸ್ ಸೌಲಭ್ಯಗಳಿಲ್ಲದೆ ಇರುವುದು ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ.ದಿನನಿತ್ಯವೂ ಶಾಲಾ ಕಾಲೇಜುಗಳಿಗೆ ಹೋಗುವ ವಿದ್ಯಾರ್ಥಿಗಳು ಬೆಳಗ್ಗೆಯಿಂದ ಬಸ್ ಗಾಗಿ ಕಾಯುವಂತಹ ಪರಿಸ್ಥಿತಿ ನಿರ್ಮಾಣವಾಗಿದ್ದು, ನಿಗದಿತ ಸಮಯದಲ್ಲಿ ಬಸ್ ಗಳು ಇಲ್ಲದೇ ಇದ್ದು, ಅಲ್ಲದೆ ಬೆಂಗಳೂರು ಕಡೆಯಿಂದ ಬರುವ ಕೆಲವು ಸರ್ಕಾರಿ ಬಸ್ ಗಳು ನಗರದ ಬಸ್ ನಿಲ್ದಾಣದಿಂದ ಬೈಪಾಸ್ ಮೂಲಕವೇ ಹೋಗುತ್ತವೆ.ಇದರಿಂದ ನಗರದ ಗಾಂಧಿವೃತ, ತಾಲ್ಲೂಕು ಕಚೇರಿ, ಟಿ.ಬಿ.ಸರ್ಕಲ್ ನಿಲ್ದಾಣದಲ್ಲಿ ಕಾಯುವವರು ಗಂಟೆಗಟ್ಟಲೆ ನಿಂತು ಕಾಯಬೇಕಿದೆ, ಒಂದೆರಡು ಬಸ್ ಬಂದರೂ ಸಹ ಅಗತ್ಯಕ್ಕಿಂತ ಹೆಚ್ಚು ಪ್ರಯಾಣಿಕರಿಂದ ತುಂಬಿ ತುಳುಕುತ್ತಿವೆ, ಈವೇಳೆ ನಿಲ್ದಾಣದಲ್ಲಿ ಬಸ್ ಹತ್ತಲು ವಿದ್ಯಾರ್ಥಿಗಳು ಬಸ್ ಹಿಂದೆ ಓಡುವಂತ ದೃಶ್ಯ ನಿತ್ಯ ಸಾಮಾನ್ಯವಾಗಿದೆ. ಇತ್ತೀಚಿಗೆ ನಿತ್ಯವೂ ಈ ಪರಿಸ್ಥಿತಿ ಕಂಡ ವಿದ್ಯಾರ್ಥಿಗಳು ಆಕ್ರೋಶಗೊಂಡು ಬೈಪಾಸ್ ರಸ್ತೆಗೆ ಹೋಗಿ ಕೆಎಸ್. ಆರ್.ಟಿ.ಸಿ ಬಸ್ ತಡೆಗಟ್ಟಿ ಪ್ರತಿಭಟನೆ ನಡೆಸಿದರಲ್ಲದೆ, ಸಾಕಷ್ಟು ಬಾರಿ ಸಂಬಂಧಪಟ್ಟ ಅಧಿಕಾರಿಗಳಿಗೆ ಈ ಬಗ್ಗೆ ಮನವಿ ಸಲ್ಲಿಸಿದ್ದರೂ ವಿದ್ಯಾರ್ಥಿಗಳಿಗೆ ಸಾರಿಗೆ ಸೌಕರ್ಯ ಕಲ್ಪಿಸದಿರುವುದು ವಿದ್ಯಾರ್ಥಿಗಳ ಆಕ್ರೋಶಕ್ಕೆ ಕಾರಣವಾಗಿದೆ.

# ಇಳುವರಿ ಹೆಚ್ಚಳಕ್ಕೆ ಮಣ್ಣು ಆಧಾರಿತ ಪೋಷಕಾಂಶಗಳ ನಿರ್ವಹಣೆ ಕೈಗೊಳ್ಳಿ

» **ಚಿತ್ರದುರ್ಗ**

ಜಿಲ್ಲೆಯಲ್ಲಿ ಹಿಂಗಾರು ಹಂಗಾಮಿನಲ್ಲಿ ಹಿಂಗಾರಿ ಜೋಳ, ಕಡಲೆ, ಕುಸುಬೆ, ಹುರುಳಿ, ಮುಸುಕಿನಜೋಳ, ಗೋಧಿ ಮತ್ತು ಸೂರ್ಯಕಾಂತಿ ಬೆಳೆಗಳಲ್ಲಿ ಹೆಚ್ಚಿನ ಇಳುವರಿ ಪಡೆಯಲು ಮಣ್ಣು ಪರೀಕ್ಷೆ ಆಧಾರಿತ ಪೋಷಕಾಂಶಗಳ ನಿರ್ವಹಣೆ ಮತ್ತು ಸಮಗ್ರ ಪೀಡೆ ನಿರ್ವಹಣೆ ಕೈಗೊಳ್ಳಬೇಕು ಎಂದು ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಸಹಾಯಕ ಕೃಷಿ ನಿರ್ದೇಶಕ ಆರ್.ರಜನೀಕಾಂತ ರೈತರಿಗೆ ಮನವಿ ಮಾಡಿದರು.

ಹಿರಿಯೂರು ತಾಲ್ಲೂಕಿನ ಬಬ್ಬೂರು ಫಾರಂನ ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ ಗುರುವಾರ ರೈತರಿಗೆ ಹಿಂಗಾರು ಹಂಗಾಮಿನ ಪ್ರಮುಖ ಕೃಷಿ ಬೆಳೆಗಳಲ್ಲಿ ಅನುಸರಿಸಬೇಕಾದ ಸುಧಾರಿತ ಆಧುನಿಕ ಬೇಸಾಯ ಪದ್ಧತಿಗಳ ತಾಂತ್ರಿಕತೆಯ ಕುರಿತು ಒಂದು ದಿನದ ತರಬೇತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಬಬ್ಬೂರು ಫಾರಂನ ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥ ಡಾ. ಓ.ಕುಮಾರ್ ಅವರು, ಹಿಂಗಾರು ಹಂಗಾಮಿನ ಪ್ರಮುಖ ಬೆಳೆಗಳಲ್ಲಿ ಅನುಸರಿಸಬೇಕಾದ ಸುಧಾರಿತ ಬೇಸಾಯ ಪದ್ಧತಿಗಳ ಕುರಿತು ರೈತರಿಗೆ ಮಾಹಿತಿ ನೀಡಿದರು. ಹಿಂಗಾರು ಹಂಗಾಮಿನ ಪ್ರಮುಖ ಬೆಳೆಗಳಲ್ಲಿ ಬರುವ ಪ್ರಮುಖ ರೋಗ ಮತ್ತು ಕೀಟಗಳ ನಿರ್ವಹಣೆಯ ಕುರಿತು ಮಾತನಾಡಿದ ಕೃಷಿ ವಿಜ್ಞಾನ ಕೇಂದ್ರದ ಕೀಟಶಾಸ್ತ್ರಜ್ಞ ಡಾ. ರುದ್ರಮುನಿ, ಕಡಲೆ ಬೆಳೆಯಲ್ಲಿ ಆರು ಸಾಲಿಗೆ ಎರಡು ಸಾಲು ಕೊತ್ತಂಬರಿ ಬೆಳೆ ಬೆಳೆಯುವುದರಿಂದ ಹಸಿರು ಕಾಯಿ ಕೊರಕ ಕೊತ್ತಂಬರಿ ಬೆಳೆಯ ಹೂವಿನ ಮೇಲೆ ಮೊಟ್ಟೆಯನ್ನು ಇಟ್ಟು ಮೊಟ್ಟೆಯಿಂದ ಹೊರಬಂದ ಮರಿಗಳು ಕೊತ್ತಂಬರಿ ಬೆಳೆಯನ್ನು ತಿನ್ನುತ್ತವೆ. ಆದ ಪ್ರಯುಕ್ತ ಕೊತ್ತಂಬರಿ ಬೆಳೆಯು ಕೀಟವನ್ನು ಆಕರ್ಷಣೆ ಮಾಡುವುದರಿಂದ ಬೆಳೆಯ ಮೇಲೆ ಕೀಟನಾಶಕಸಿಂಪರಣೆಮಾಡುವುದರಿಂದ ಹಸಿರು ಕಾಯಿ ಕೊರಕದ ಬಾದೆ ಕಡಿಮೆ ಮಾಡಬಹುದು. ಕಡಲೆ ಬೆಳೆಯಲ್ಲಿ ಅಲ್ಲಲ್ಲಿ ಕವಲೊಡೆದ ಮರದ ಟೊಂಗೆಗಳನ್ನು ನಿಲ್ಲಿಸುವುದರಿಂದ ಪಕ್ಷಿಗಳು ಕುಳಿತು ಕೀಟಗಳನ್ನು ಆಯ್ದು ತಿನ್ನುತ್ತವೆ. ರೈತ ಭಾಂದವರು ತಮ್ಮ ಜಮೀನಿನಲ್ಲಿ ಸಿಗುವ ಬೇವಿನ ಬೀಜಗಳನ್ನು ಆಯ್ದು ಶೇ.5ರ ಬೇವಿನ ಬೀಜದ ಕಷಾಯವನ್ನು ತಯಾರಿಸಿಕೊಂಡು ಕಡಲೆ ಬೆಳೆಯ ಬೆಳವಣಿಗೆ ಹಂತದಲ್ಲಿ ಸಿಂಪರಣೆ ಮಾಡುವುದರಿಂದ ಕೀಟಗಳ ನಿರ್ವಹಣೆ ಸಾಧ್ಯವಾಗುತ್ತದೆ. ಕೀಟನಾಶಕಗಳಾದ ಪ್ರೋಪೆನೊಫಾಸ್ @ 2 ಮಿ.ಲೀ ಪ್ರತಿ ಲೀಟರ್ ನೀರಿಗೆ ಅಥವಾ ಎಮಾಮೆಕ್ಟಿನ್ ಬೆಂಜೋಯೆಟ್@0.3ಗ್ರಾಂಪ್ರತಿಲೀಟರ್ ನೀರಿಗೆ ಹಾಕಿ ಸಿಂಪರಣೆ ಮಾಡುವುದರಿಂದ ಕಾಯಿ ಕೊರಕ ಹುಳುವಿನ ಬಾದೆಯನ್ನುಕಡಿಮೆ ಮಾಡಬಹುದೆಂದು ತಿಳಿಸಿದರು. ತರಬೇತಿಯ ನಂತರ ಕೃಷಿ ವಿಜ್ಞಾನ ಕೇಂದ್ರದ ಕಡಲೆ ಬೆಳೆಯ ತಾಕಿಗೆ ರೈತರೊಂದಿಗೆ ಭೇಟಿ ನೀಡಿ ಕಾಯಿ ಕೊರಕ ಹುಳುವಿನ ಸಮಗ್ರ ನಿರ್ವಹಣೆ ಕುರಿತು ಮಾಹಿತಿ ನೀಡಿದರು.







Printed by: GOVINDAPPA.T Published by: DARSHAN.T Owned by: DARSHAN.T and Printed at: ASHAYA PRINTERS No.94, C.M.C. Colony, Yangammana Katte, Chitradurga-577 501, Chitradurga Dist, Karnataka state. Published at : No. 55 Ingaladal Main Street, Near Canara Banak , Ingaladal Village, Ingaladal Post - 577524, Chitradurga Tq, Chitradurga Dist, Karnataka state. Editor : DARSHAN.T